
ಕೊರವಂಜಿ



Koravanji

ಮಾರ್ಚಿ ೧೯೪೫

ಮಾಸ ಪತ್ರಿಕೆ

ಸಂಪಾದಕರು :
ಶ್ರೀ|| ರಾ. ಶಿ.

ಚಿತ್ರಕಾರರು:
ಶ್ರೀ|| ಆರ್. ಕೆ. ಲಕ್ಷ್ಮಣ್

ಬರಹಗಾರರು :

ಶ್ರೀ|| ಬಾಬು

ಶ್ರೀ|| ಬೀಚಣ್ಣ

ಶ್ರೀ|| ನಾ. ಕ.

ಶ್ರೀ|| ಕೇಸರಿ

ಶ್ರೀ|| ಸಿ. ಕೆ. ಅ.

ಶ್ರೀ ಸೂರಿಬೆಲೆ

ಬಿಡಿ ಪತ್ರಿಕೆ -- ಕೇವಲ ಎರಡಾಣೆ

ನಗೆಯ ಮಾಸಪತ್ರಿಕೆ.

From 2-3-1945 Daily 3 Shows at 4, 7 & 10 p.m.

AT

VIJAYA TALKIES

BANGALORE CITY

Kardar Productions

Present

MEHTAB

WASTI

BADRIPRASAD

RAJKUMARI SHUKLA

NIRMALA · SAFIA

ANWAR ETC.



KAPURCHAND RELEASE



ಕೇಸರಿ ಕುಟೀರಂ ಲಿ., ಮದರಾಸು

ಲೋಧ್ರ—ಗರ್ಭಾಶಯ ಟಾನಿಕ್

ಅಕ್ರಮ ಮುಟ್ಟು, ಬಂಜೆತನ, ಗರ್ಭಜವಾಯು, ನಿದ್ರಾಭಂಗ, ಅಜೀರ್ಣ, ಮಲಬದ್ಧತೆ, ಕೆಮ್ಮು, ತಲೆನೋವು, ಬೆನ್ನುನೋವು ಮುಂತಾದುವನ್ನು ವಾಸಿಮಾಡುವುದು.

ಅರ್ಕ—ಶ್ರೇಷ್ಠ ಜ್ವರ ನಿವಾರಿಣಿ

ಇನ್‌ಫ್ಲೂಯೆಂಜಾ, ಟೈಫಾಯಿಡ್, ಮಲೇರಿಯ ಮುಂತಾದ ಎಲ್ಲಾ ವಿಧವಾದ ಜ್ವರಗಳನ್ನೂ ಪ್ಲೀಹ ಮತ್ತು ಪಿತ್ತಕೋಶ ರೋಗಗಳನ್ನೂ ಗುಣಪಡಿಸುವುದು


ಅಮೃತ—ರಕ್ತಶುದ್ಧಿ ಟಾನಿಕ್

ಎನೀಮಿಯ, ಮಲಬದ್ಧತೆ, ಅಜೀರ್ಣ, ನಿಶ್ಶಕ್ತಿ, ಬುದ್ಧಿಮಾಂದ್ಯ, ಎದೆಯ ನಿಶ್ಶಕ್ತಿ, ಜ್ಞಾಪಕಶಕ್ತಿ ಇಲ್ಲದಿರುವದು, ದೃಷ್ಟಿಮಾಂದ್ಯ, ತಲೆ ತಿರುಗುವುದು, ಚರ್ಮರೋಗಗಳು ಮುಂತಾದುವನ್ನು ವಾಸಿಮಾಡುವುದು.

ಏಜಂಟರು :

ಸಿಟಿ ಮೆಡಿಕಲ್ ಅಂಡ್ ಜನರಲ್ ಏಜನ್ಸಿ,

ಚಿಕ್ಕಪೇಟೆ, : : : ಬೆಂಗಳೂರು ಸಿಟಿ.



ಸಂಪುಟ ೩] ಕೊರವಂಜಿ—ಮಾರ್ಚಿ ೧೯೪೩ [ಸಂಚಿಕೆ ೧೨

ಕುಹಕಿಡಿಗಳು

—o—

ಈ ವರ್ಷ ಕಾಮನ ಹಬ್ಬವನ್ನು ಜರ್ಮನಿಯಲ್ಲೂ ಶಾಸ್ತ್ರೋಕ್ತವಾಗಿ ಆಚರಿಸುತ್ತಾರಂತೆ.

✤ ✤ ✤

ನಮ್ಮೂರಿನಲ್ಲಿ ಝಾಡಮಾಲಿಗಳ ಮುಷ್ಕರವಂತೆ.

—ಇಂತಹ ಸಮಯದಲ್ಲಿ ಪೌರಸಭಾ ಚುನಾವಣೆ ಚೆನ್ನು.

✤ ✤ ✤

ಅಧ್ಯಕ್ಷರು ಸಮ್ಮೇಳನದಲ್ಲಿ ಮುಖಪಾತ್ರವನ್ನು ವಹಿಸಿದರು.

—ಅಂದಮೇಲೆ ನೌಕರನು ಮುಖ್ಯ (ಪತ್ರಿಕೆಯಸುದ್ದಿ) ಪಾತ್ರವನ್ನು ವಹಿಸಿರಲೇಬೇಕು.

✤ ✤ ✤

ಬೊಂಬಾಯಿನ ರಸ್ತೆಗಳಲ್ಲಿ ಹಾಲಿನ ಕೋಡಿ ಹರಿಯಿತಂತೆ.

—ಇದನ್ನು ಹಿರಿಯಕ್ಷರಗಳಲ್ಲಿ ಅಮೇರಿಕಾದಲ್ಲಿ ಪ್ರಚಾರ ಮಾಡುತ್ತಿದ್ದಾರಂತೆ—ಸಮರ ಕಾಲದಲ್ಲೂ ಭಾರತದಲ್ಲಿ ಹಾಲಿನ ಕೋಡಿ ಹರಿಯುತ್ತೆ ಎಂದು.

✤ ✤

ಯಾಲ್ಟಾ ಸಮ್ಮೇಳನದಲ್ಲಿ ಒಮ್ಮತದ ಠರಾವು ಪಾಸಾಯಿತೆಂಬುದು ಒಂದು ಸುದ್ದಿ.

—'ಅಬಲ ರಾಷ್ಟ್ರಗಳ ಹಕ್ಕುಗಳನ್ನು ವಶ ಪಡಿಸಿಕೊಳ್ಳಲೇಬೇಕು' ಎಂಬ ಠರಾವೇ ?

✤ ✤ ✤

ಜಪಾನಿನಲ್ಲಿ ಇನ್ನುಮೇಲೆ ಚಕ್ರವರ್ತಿಯ ದರ್ಬಾರು ಜ್ವಾಲಾಮುಖಿಯೊಳಗೇ ನಡೆಯುತ್ತಂತೆ.

✤ ✤ ✤

ಹಿಟ್ಲರನ ಅನುಯಾಯಿಗಳು ಮುಂದಿನ ಯುದ್ಧದ ಏರ್ಪಾಡು, ಭವಿಷ್ಯಗಳನ್ನು ಆಗಲೇ ಮಾಡುತ್ತಿದ್ದಾರಂತೆ.

✤

ಚುನಾವಣೆ ಫಲಿತಾಂಶಗಳು ಇನ್ನೊಂದೆರಡು ಕೇಂದ್ರಗಳಿಂದ ಮಾತ್ರ ಬರಬೇಕಂತೆ.

—ಫಾಲ್ಗುಣ ಶುದ್ಧ ಪೌರ್ಣಮಿಯ ಹೊತ್ತಿಗೆ ಖಂಡಿತ ಬರುತ್ತದೆ—ನಡಿಯಲಿ ಕಾಮನ ಹುಣ್ಣಿಮೆ—

✤ ✤ ✤

ಮಾರ್ಚಿ ತಿಂಗಳು ಲಾಯರುಗಳಿಗೆ ಅನುಕೂಲ—(ಭವಿಷ್ಯದ ಹೇಳಿಕೆ)

—ಓಹೋ—ತಕರಾರು ಅರ್ಜಿಗಳ ರಾಶಿ.

✤ ✤ ✤

ಎರಡೂವರೆಸಾವಿರ ಹೊಸ ಮೋಟಾರು ಗಾಡಿಗಳು ಭಾರತಕ್ಕೆ ಬರುತ್ತವೆಯಂತೆ.

—ಅಂದರೆ ನಮ್ಮ ದೇಶಕ್ಕೆ ಎರಡಾದರೂ ಬರಲೇಬೇಕಲ್ಲ. ಈ ಚುನಾವಣೆಗಳ ಹಿಂದೆಯೇ—

✤ ✤ ✤

ಕಾಗದದ ತಯಾರಿಕೆಯು ಇಮ್ಮಡಿಯಾಗಿದೆಯಂತೆ

—ಅಂದಮೇಲೆ ರೂಪಾಯಿ ಇನ್ನೂ ಅಗ್ಗವಾಗುತ್ತಲ್ಲಾ !

✤ ✤ ✤

"ಪೆನ್ನಿಸಿಲ್ಲಿನ್" ಎಂಬ ಸಿದ್ಧೌಷಧವು ಕಂಡುಹಿಡಿಯಲ್ಪಟ್ಟಿದೆಯಂತೆ.

—ಏನು ಮಹಾ ! ನಮ್ಮ ವಾತ್ಸ್ಯಾಯನನಿಗೆ ಇದು ಗೊತ್ತೇ ಇತ್ತು.

✤ ✤

ಕಾಮಣ್ಣ ಕಟ್ಟಿಗೆ

ಭೀಮಣ್ಣ ಬೆರಣಿ

—ಹೀಗೆ ಕೂಗಿ ಕಟ್ಟಿಗೆ ಕ್ರಾಂತಿಯನ್ನೆಬ್ಬಿಸಕೂಡದು ಎಂದು ಹೆಬ್ಬಿಗುಬ್ಬಾಲೆಯಲ್ಲಿ ನಿರೂಪ ಹೊರಡಿಸಿದ್ದಾರಂತೆ.

✤ ✤ ✤

ಇನ್ನೊಂದು ತಿಂಗಳಲ್ಲೇ—

"ಊರಿಗೆ ಬಂತು ಉಗಾದಿ"

—ಅಯ್ಯೋ ಬಂತಲ್ಲಪ್ಪಾ ವಾರ್ಷಿಕ ಸಂಚಿಕೆಗಳೂ ಕೂಡ !

✤ ✤ ✤

"ಲಕ್ಷ್ಮೀಕಾಂತಂ ಕೊಲೆ ಮೊಕದ್ದಮೆ" ಎಂದು ಪುಸ್ತಕದ ಹೊರಗಿನ ಅಟ್ಟೆಯ ಮೇಲ್ಹೊದಿಕೆ—

—ಒಳಗೆ ತೆಗೆದರೆ, ಪುಸ್ತಕ ಯಾವುದು ಗೊತ್ತೇ "ವರ್ಡಿಕ್ಟ್ ಆನ್ ಇಂಡಿಯಾ"

✤ ✤ ✤

ಉರಿಗಾಳು

ಮದ್ರಾಸ್ ಕಾರ್ಪೊರೇಷನ್ ಮೇಯರ್‌ರವರು ಮಾಡಿದ ಒಂದು ತಮಿಳು ಭಾಷಣವನ್ನು ಮೆಚ್ಚಿ ಚಕ್ರವರ್ತಿ ರಾಜಗೋಪಾಲಾಚಾರಿಯವರು, "ನಿಮ್ಮನ್ನು ಯಾವುದಾದರೂ ಶಾಲೆಯಲ್ಲಿ ತಮಿಳು ಪಂಡಿತರಾಗಿ ನಿಯಮಿಸಬಹುದು" ಎಂದರಂತೆ........ನಮ್ಮೂರು ಮೇಯರನ್ನು ಹೀಗೆ ಮೆಚ್ಚಲು ಯಾರಿಗೆ ತಾನೆ ಧೈರ್ಯ?

✦ ✦ ✦

ಗ್ರಾಮದವರಿಂದ ಕೊಡಲ್ಪಟ್ಟ ಹಾರಾತುರಾಯಿಗಳನ್ನು ಸ್ವೀಕರಿಸಿ, ಬಾಲಕ ಮೂದವರ ಹಾರಾತುರಾಯಿಗಳನ್ನು ಹೊಂದಿ, ಅಲ್ಲಿಂದ ಮುಂದೆ ತೆರಳುತ್ತಾ, ಸುಮಾರು ೨೦ ಗ್ರಾಮದವರು ಕೊಟ್ಟ ಹಾರಗಳನ್ನು ಸ್ವೀಕರಿಸುತ್ತ ಸಹಕಾರ ಸಂಘದ ಹಾರಾತುರಾಯಿಗಳನ್ನು ಸ್ವೀಕರಿಸಿ, ಉಪಾಹಾರಕ್ಕೆ ದಯಮಾಡಿಸಿದರು. (ಸಚಿವರೊಬ್ಬರ ಪ್ರವಾಸ ವರದಿ)........ಆಹಾರವೂ ಬೇಕು, ಈ ಹಾರವೂ ಬೇಕು.

✦ ✦ ✦

ಇಂಡಿಯಾದೇಶದಲ್ಲೇ ತಯಾರಾಗಲಿರುವ ಮೊತ್ತಮೊದಲಿನ ಮೋಟಾರ್ ಕಾರಿಗೆ "ಹಿಂದುಸ್ತಾನ್........10" ಎಂಬ ಹೆಸರನ್ನಿಡುವರಂತೆ. ಕಂಪನಿ ಮಾಲೀಕರ ಕನ್ನಡ ಪ್ರೇಮಕ್ಕಾಗಿ ನಾವು ಅವರನ್ನು ಅಭಿವಂದಿಸಿ, ಅವರ ಆಹ್ವಾನವನ್ನು ಮನ್ನಿಸೋಣ.

✦ ✦ ✦

ಮದ್ರಾಸ್ ನಗರದ ಜೂಅನ್ನು ಭರ್ತಿಮಾಡಲು ವಿಶೇಷ ಅಧಿಕಾರಿಗಳೊಬ್ಬರು ಮೈಸೂರಿಗೆ ಬರುವರಂತೆ!........ಹಿತ್ತಲಗಿಡ ಮದ್ದಲ್ಲ, ಎಂಬುದಕ್ಕೆ ಇದೂ ಒಂದು ನಿದರ್ಶನ.

✦ ✦ ✦

ಉದ್ಯಾನ ಸ್ಪರ್ಧೆಯಲ್ಲಿ ತಮಗೆ ಬಹುಮಾನ ಬರದೆ ಇದ್ದ ಕಾರಣ ಅನೇಕ ಅಧಿಕಾರಿಗಳು ಆಫೀಸ್ ಜವಾನರಿಗೆ ಜುಲ್ಮಾನೆ ವಿಧಿಸಿರುವರು ಎಂಬುದು ಸುಳ್ಳಂತೆ ....ಬೇರೆ ಯಾವ ಶಿಕ್ಷೆ ವಿಧಿಸಿದರೋ, ತಿಳಿಯದು.

✦ ✦

ಯುದ್ಧ ಇಷ್ಟರಲ್ಲೇ ಮುಗಿಯುತ್ತದೆ ಎಂಬ ಭೀತಿ ಅನೇಕರನ್ನು ಆವರಿಸಿದೆ ....ಆದರೆ, ಹೆದರಿಕೆಗೆ ಅವಕಾಶವಿಲ್ಲ. "ಶಾಂತಿಸಮ್ಮೇಳನ" ಒಂದು ಜರುಗಬೇಕಲ್ಲ.

ಆಹಾರವನ್ನು ಉಳಿಸಿರಿ

ಈ ಮೃಗಾಲಯದಲ್ಲಿರುವ ಯಾವ ಪ್ರಾಣಿಯೂ ಕೂಡ ನೋಡಬಂದವರಿಗೆ ಕಡಲೆಕಾಯಿ ಬಾಳೆಹಣ್ಣು ಮುಂತಾದವುಗಳನ್ನು ಕಂಬಿ ಸಂದಿನಿಂದ ಕೊಡಕೂಡದು.

ಡೈರೆಕ್ಟರ್.

ಕಲ್ಕತ್ತಾ ವಿಶ್ವವಿದ್ಯಾನಿಲಯದ ಅಧ್ಯಾಪಕರು ಹಾಸ್ಯದ ಚಟಾಕಿಗಳನ್ನು ಪಾಠದ ನಡುವೆ ಹಾರಿಸುವುದೇ ಇಲ್ಲವಂತೆ.........ನಮ್ಮವರು ಹಾರಿಸುವುದೂ ಅಂಥದ್ದನ್ನೇ!

✤ ✤ ✤

"ಆರುವರ್ಷದ ಕುಮಾರಿ ನಾಳಾಯಣಿಯ ಭರತನಾಟ್ಯ" ....ಸರಿ. ಇನ್ನು ಹಲವು ತಿಂಗಳೊಳಗೆ ಆಕೆಯ ಚಿತ್ರವನ್ನು ನಾವು ಹಲ್ಲುಪುಡಿ ಜಾಹಿರಾತಗಳಲ್ಲಿ ಕಾಣಬಹುದು.

✤ ✤ ✤

"ಕಾಂಗ್ರೆಸ್ ಪಕ್ಷದ ವಿಜಯಿಗಳ ಸಂತೋಷಕೂಟ ಸಮಾರಂಭ"........ ಉಪಾಹಾರ ಏನು ಎಂಬುದು ಗೊತ್ತೇ ಇದೆ........ನೆಲಗಡಲೆ, ಆಡಿನಹಾಲು.

✤ ✤ ✤

"ಇರಲಿ, ಇರಲಿ. ಅವರೂ ಇರಲಿ! ಎಲ್ಲರೂ ಇರಲಿ! ಇನ್ನೇನಿಲ್ಲದಿದ್ದರೂ ಸಭೆಗೆ ಭೂಷಣ"

"ಚೆನ್ನಾಯಿತು. ಅದೂ ಇಲ್ಲವಲ್ರಿ, ಕೆಲವರಿಂದ?"

✤ ✤ ✤

"ಜಿಲೇಬಿಯನ್ನು ತುಪ್ಪದಲ್ಲೇ ಮಾಡಬೇಕು, ವನಸ್ಪತಿಯಲ್ಲಿ ಮಾಡಕೂಡದು, ಎಂಬ ನಿರ್ಬಂಧ ಎಲ್ಲೂ ಇಲ್ಲ" (ಮದ್ರಾಸ್ ಹೈಕೋರ್ಟು ಜಡ್ಜ್‌ಮೆಂಟ್)........ಉಡುಪಿ ಚಾರ್ಟರ್, ಅಂದರೆ, ಇದು.

✤ ✤ ✤

"ಆಸ್ಟ್ರೇಲಿಯಾ ಖಂಡಕ್ಕೆ ನಾನು ಭಾರತೀಯ ಶಿಷ್ಯಮಂಡಲಿಯನ್ನು ಸಂತೋಷದಿಂದ ಸ್ವಾಗತಿಸುತ್ತೇನೆ"

(ಹೈ ಕಮಿಷನರ್ ಸರ್ ಇವನ್ ಮೆಕ್ಕೆ ಅವರು)........ಅದು ಸರಿ! ಬಿಳಿಯವರನ್ನಲ್ಲದೆ ಮತ್ತೊಬ್ಬರನ್ನೂ ತಮ್ಮ ದೇಶದಲ್ಲಿ ಇರಗೊಡಿಸುವುದಿಲ್ಲ ಎಂಬ ಆಸ್ಟ್ರೇಲಿಯನ್ ನೀತಿಯನ್ನು ಅಲ್ಲಿ ಕಲಿತು, ನಮ್ಮ ದೇಶ ಬರೀ ಕರೀ ಜನರಿಗೆ ಮೀಸಲು ಎಂದು ನಮ್ಮವರು ಹೇಳಿದರೆ ಮೆಕ್ಕೆ ಅವರು ಮಾಡುವುದೇನು?

ಕಂಠೋಪರಿಷತ್ತು

ಸೀಬು ಕಾಲೇಜು ಮೆಟ್ಟಿಲನ್ನು ಇಳಿಯುತ್ತಿದ್ದ ಯುವಕ. ಅವನ ಬಟ್ಟೆಯ ಯೋಗ್ಯತೆ ರೂಪು, ಅವನ ದೇಹಕ್ಕಿರಲಿಲ್ಲ. ಆದರೂ ತನ್ನ ಗಂಟಲಲ್ಲಿರುವ ದೊಡ್ಡ ಗಂಟೊಂದು ಇಲ್ಲದಿದ್ದರೆ ತಾನೂ ಒಬ್ಬ ಮನ್ಮಥನೆಂದೇ ಅವನು ಹೇಳುತ್ತಾನೆ.

"ಯಾರೋ ಒಬ್ಬ ಸ್ನೇಹಿತ ಇನ್ನಾವನೋ ಒಬ್ಬನಿಗೆ ಹೆಗ್ಗತ್ತಿನಮೇಲೆ ಪ್ರೀತಿಗಾಗಿ ಹೊಡೆದನಂತೆ. ತಕ್ಷಣವೇ ಆತ ಮೃತಿ ಹೊಂದಿದನಂತೆ. ಮನುಜರು ಕ್ರಮ.........." ಹೀಗೆ ಸೀಬು, ಯಾವುದೋ ಒಂದು ಗಾಳೀ ವರ್ತಮಾನ ಕೇಳಿದ. ಅವತ್ತಿನಿಂದ ಈ ಪ್ರಪಂಚದಮೇಲೆ ಜೀವಿಸುತ್ತಿರುವ ಎಲ್ಲಾ ಜೀವ ಜಂತುಗಳ ಕತ್ತುಗಳಮೇಲೂ ಅವನ 'ನಿಗ' ಬಹಳವಾಗಿದೆ. ಅದರಲ್ಲಿಯೂ ನೆಲಕ್ಕೆ "ಸಮನಾಗಿರುವ'' ಆ ಕತ್ತುಗಳಿಗಿಂತ, "ನೆಟ್ಟಗಿರುವ" ಕತ್ತುಗಳಲ್ಲಿ ಅವನಿಗೆ ಸಹಾನುಭೂತಿ ಹೆಚ್ಚು.

ಎದೆ ಸೀಳಿ ಅದರೊಳಗೆ ಎರಡಕ್ಷರ ಹಾಕಿಕೊಂಡು ಕಾಲೇಜನ್ನು ಬಿಟ್ಟನಂತರ ಸೀಬು, ಕತ್ತುಗಳ ವಿಷಯದಲ್ಲಿ ಸಂಶೋಧನೆಗೆ ತೊಡಗಿದನು. ಆ ವಿಷಯದ ಮೇಲೆ 'ವಾಕ್ಯರಚನಾತ್ಮಕ ಕಾರ್ಯ' ವನ್ನು ಕೈಗೊಳ್ಳಬೇಕೆಂಬ ಹಟವೂ ಅವನಲ್ಲಿ ಮೂಡಿತು. ''ಸಮಾಜ, ಸಾಹಿತ್ಯ, ರಾಜಕೀಯಗಳಲ್ಲಿ ಕತ್ತುಗಳ ಸ್ಥಾನ'' ಎಂಬುದನ್ನಧಿಕರಿಸಿ ಒಂದು ದೀರ್ಘನ್ಯಾಸವನ್ನು ರಚಿಸುವುದು ಅವನ ಧ್ಯೇಯಗಳಲ್ಲೊಂದು.

✤ ✤ ✤

ಆ|| ವಿದ್ವಾನ್ (ಆ||=ಆರ್ಡಿನರಿ) ರವರೊಬ್ಬರ ಸಂಗೀತ ಕೇಳುವ ಧರ್ಮಸಂಕಟದಲ್ಲಿ, ಸೀಬು, ಒಮ್ಮೆ ಬಿದ್ದನು. ಅವರ ಸಂಗೀತವನ್ನು ಕೇಳಿದಮೇಲೆ ಹಿಂದಿನ ಕವಿಗಳು ಶಂಖಕ್ಕೆ, ಕತ್ತುಗಳನ್ನೇಕೆ ಹೋಲಿಸುತ್ತಿದ್ದರೆಂಬುದು ಅವನಿಗೆ ಆಗ ತಿಳಿಯಿತು. ಅವರ ಕೊರಳ ವಿಷಯದಲ್ಲಿ ಅವನಿಗೆ ವಿಪರೀತ ಕೋಪ. ಇವರು ಹೇಳುವ ಸಂಗೀತವು ಒಂದು ಕಛೇರಿಯುಲ್ಲೊದರಬಹುದಾಗಿದ್ದರೆ, ತಾನು ಚಲನ ಚಿತ್ರರಂಗದಲ್ಲಿ ಈಗಾಗಲೇ ''ಮೈಸೂರು ಸೀಬು" ವೆಂದು ಪ್ರಸಿದ್ಧಿ ಹೊಂದಬಹುದಾಗಿತ್ತು ಎಂದು ಪರಿತಪಿಸಿದನು. ಅವನಿಗೆ ಆಗ—

"ಕೊರಳೇನೋ ಬೇಕಾದಹಾಗಿದೆ
ಆದರೆ ಕೊಯ್ಯುವವರು ಕಡಿಮೆ''

—ಎನ್ನಿಸಿತು.

✤ ✤ ✤

ಸೀಬುವು ಬ್ರಾಹ್ಮಣನಾದುದರಿಂದ ಬೇಗ ಮದುವೆಯಾಗಬೇಕೆಂದು ಹಂಬಲನವಾಯಿತು. ಆ ಸಂದರ್ಭದಲ್ಲಿ ಅವನು ಸಂಧಿಸಿದ ಕತ್ತಿನ ದೃಶ್ಯ ಚಿತ್ರವೇನ್ನಾಗಿತ್ತು.

✤ ✤

ಬಿ.ಎ., ಮಾಡಿದ ಹುಡುಗನಿಗೆ ರೂಪದ ಅವಶ್ಯಕತೆಯೇನಿಲ್ಲ. ಆ ಸಂದರ್ಭದಲ್ಲಿ ಹುಡುಗಿ ಚೆನ್ನಾಗಿದ್ದರಾಯಿತು. ಹಾಗೆ ಸೀಬುವಿನ ಮದುವೆಗೆ ಸಕಲವೂ ಸಿದ್ಧವಾಯಿತು. ಅಂತರ (ಪ) ಪಟವು ಸಂದ ತಕ್ಷಣವೇ ಸೀಬುವಿನ ದೃಷ್ಟಿಗೆ ಬಿದ್ದುದು ಸೀತೆಯ ಕೊರಳು. ಅದು ತಾನೆ, ತಾಳ್ಮೆಯಿಂದ ತಾಳಿ ಕಟ್ಟಿಸಿಕೊಳ್ಳುವ ತಬ್ಬಲಿ!

◆ ◆ ◆

ಇನ್ನೊಂದು ಕತ್ತೆ—

"ಒಂದಕ್ಕೊ, ಇನ್ನೊಂದಕ್ಕೊ ವ್ಯಾಖ್ಯಾನವನ್ನು ಕಲ್ಪಿಸುವವರನ್ನು ಸಿಕ್ಕಾಪಟ್ಟೆ ಬಯ್ಯಿರಿ! ಪ್ರಪಂಚದಲ್ಲಿ ಸಮಾನತೆಗಾಗಿ ಹೋರಾಡಿ! ಬಟ್ಟೆಯು ಬಯಲಾಗಬೇಕು! ಕಣಿವೆಯು ಸಮನಾಗಬೇಕು! ಸಾಹಿತಿಯು ಸುಮ್ಮನಾಗಬೇಕು! ನಲವತ್ತು ಕೋಟಿ ಉಪನ್ಯಾಸಕರಾಗಬೇಕು! ವೃದ್ಧರಾಗುವುದೇ ತಪ್ಪು! ಹಳೆಯದನ್ನು ಕಳೆದು ಹೊಸದನ್ನು ತಳೆಯಬೇಕು. ಎತ್ತುಗಳು ಜೋಳದಕಡ್ಡಿ ತಿನ್ನಬೇಕಾಗಿರುವಾಗ ಕುದುರೆಯೂ ಜೋಳದ ಕಡ್ಡಿಯನ್ನೇ ತಿನ್ನಬೇಕು. ಕೂಲಿಗಾರರ ರಕ್ತವನ್ನೇ ಸಾಹಿತ್ಯದ ಏಕಮಾತ್ರ ಆಹಾರವನ್ನಾಗಿ ಮಾಡಿಕೊಳ್ಳಬೇಕು. ಅಶ್ಲೀಲವೆನ್ನುವದು ಇಲ್ಲವೇ ಇಲ್ಲ. ಮರ್ಯಾದೆಯ ಪರಿಯು ಮನುಷ್ಯನಿಗೆ ಬೇಕಿಲ್ಲ.''

—ಹೀಗೆ ಏನೇನೋ ಮಾತನಾಡಿ ಒಂದು ಸವೆಹುಲ್ಲಿಗೆ ಹಾರವನ್ನು ಹಾಕಿಕೊಂಡು, ಸುಮ್ಮನೆ ಕುಳಿತಿತು.

◆ ◆ ◆

ಲೈಸನ್ಸ್ ಪಡೆದ ಪೈ|| ರ, ಜಾಗಿರ್ದಾ, ಅನೇಕರ ಮೇಲೆ ಕುಸ್ತಿ ಮಾಡಿ ಹೆಸರುವಾಸಿಯಾದ ಪೈ|| ಸು, ಯಾರನ್ನೋ ಗುದ್ದಾಡಿ 'ಸಮ' ಮಾಡಿಕೊಂಡು ಹಾರ ಹಾಕಿಕೊಂಡು ತನ್ನ ಪಾಡಿಗೆ ತಾನು ಬರುತ್ತಿರುವಾಗ ಇದ್ದಕ್ಕಿದ್ದ ಹಾಗೆ ಉತ್ಸಾಹದಿಂದ ನುಗ್ಗಿ ಒಂದು ಕತ್ತೆ, ಅವನನ್ನು ಹೊತ್ತುಕೊಂಡು ಕೂಗಿಕೊಳ್ಳತೊಡಗಿತು.

◆ ◆ ◆

ಓದಿದ್ದು ಮನಸ್ಸಿಗೆ ಹಿಡಿಯದುದರಿಂದ, ಯಾವುದೋ ಒಂದು ಕತ್ತೆ, ಮನುಜರು ಮಾಡಿದ ತಪ್ಪಿಗಾಗಿ ತನ್ನ ಸುತ್ತಲೂ ಹಗ್ಗವನ್ನು ಕಟ್ಟಿಕೊಂಡು—ಚಾಮುಂಡಿ ಬೆಟ್ಟದ ತಂಪಾದ ತಪ್ಪಲಿನ ಮರವೊಂದರಲ್ಲಿ—'ಝೂಲಾ' ಡುತ್ತಿತ್ತಂತೆ.

◆ ◆ ◆

ಅಂತಹ ಕತ್ತೆಗಳ ಕಷ್ಟಸುಖಗಳನ್ನು ವಿಚಾರಿಸಿ, ತಕ್ಕ ಕಾರ್ಯಕ್ರಮವನ್ನು ಕೈಗೊಳ್ಳಲು ಅ.ಕ. * ಕಂಠೋಪರಿಷತ್ತು ಒಂದನ್ನು ಇಷ್ಟರಲ್ಲೇ ಸೇರಿಸಲಾಗುತ್ತದೆ. ಅದರಲ್ಲಿ ಭಾಗವಹಿಸಲಿಚ್ಛಿಸುವ ಕತ್ತೆಗಳು ಸಾಧ್ಯವಾದಷ್ಟು ಬೇಗ ತಂತಮ್ಮ ವಿಳಾಸಗಳೊಂದಿಗೆ ಬರೆದುಕೊಳ್ಳಬೇಕೆಂದು ಕಾರ್ಯದರ್ಶಿಗಳಾದ ಶ್ರೀ|| ಸೀಬು, ರವರು ತಿಳಿಸುತ್ತಾರೆ.

---

* ಅಖಿಲ ಕರ್ನಾಟಕ
ಅನಾದಿ ಕರ್ನಾಟಕರಲ್ಲ.

—ಶಾಬು.

ಜನವರಿ ಇಪ್ಪತ್ತಾರು

ತಾತ ಮನೆಯ ಹಿಂದಿನ ತೋಟದಲ್ಲಿ ನಿಂಬೆ, ನಿಂಬೆಯ ಗಿಡಗಳನ್ನು ನೋಡಿ ನಿಟ್ಟುಸಿರುಬಿಟ್ಟ. 'ಏನು! ಶುದ್ಧ ಕೆಲಸಕ್ಕೆ ಬಾರದ ಹುಡುಗರು!' ಎಂದು ಗೊಣಗುಟ್ಟಿದ.

ದೂರದಲ್ಲಿ "ಬೋಲೋ......ಕೀ ಜೈ"ಗಳು ಸುಮ್ಮನೆ ಒಂದರ ಹಿಂದೆ ಒಂದು ಒದೆದುಕೊಂಡು ಬರುತ್ತಿತ್ತು. 'ಏನು! ಇಷ್ಟರಲ್ಲೇ ಆಗಿಹೋಯಿತು ಇವರ ಹಾರಾಟ!' ಎಂದುಕೊಂಡ ತಾತ. "ಮನೇತುಂಬ ಎಳೇನಿಂಬೇಕಾಯಿಗಳು ಸೇರಿಕೊಂಡರೆ, ಗಿಡದಲ್ಲಿ ಹಣ್ಣು ಹೇಗೆ ಹುಟ್ಟೀತು!" ಎಂದು ನಡು ಬಗ್ಗಿದ್ದ ಹಾಗೇ ಕುಳಿತು, ಒಂದು ಪಾತಿ ಕೆದಕತೊಡಗಿದ.

ಸ್ವಲ್ಪ ಹೊತ್ತಾದಮೇಲೆ ತಾತನ ಮೊಮ್ಮಗನೂ ಇಬ್ಬರು ಮರಿಮಕ್ಕಳೂ ಬಂದರು. "ಎಲ್ಲಿ ಹೋಗಿದ್ದಿರೊ?" ಎಂದ ತಾತ. "ಇದೇನು ತಾತ! ಇವತ್ತು ಜನವರಿ ಇಪ್ಪತ್ತಾರಲ್ಲವೆ?" "ಹೌದು, ಹೌದು, ಮರೆತೇ ಹೋಯಿತು. ಮುದಿ ಆಗತಾ ಬಂದೆ. ನಿಜ. ಇವತ್ತು ಸ್ವಾತಂತ್ರ್ಯಪ್ರತಿಜ್ಞಾ ದಿವಸವಲ್ಲವೆ! ಹೌದು, ಹೌದು, ಮಹಾರಾಯ, ಆ ಪ್ರತಿಜ್ಞೆ ಬರೆದವನು ದೊಡ್ಡ ಮೇಧಾವಿ ಇರಬೇಕು. ನಮ್ಮ ದೇಶಕ್ಕೆ ಆಗಿರೊ ನಾಲ್ಕು ಅನಾಹುತಗಳು ಯಾವ್ಯಾವುದು ಅಂದಿದ್ದಾನೆ. ಆರ್ಥಿಕ, ರಾಜಕೀಯ, ಸಾಂಸ್ಕೃತಿಕ, ಆಧ್ಯಾತ್ಮಿಕ ಅಂತ ಅಲ್ಲವೆ? ಅವನು ಹೇಳಿರೊ ಕ್ರಮ? ಹೇಗಿದೆ ನೋಡಿದೆಯ? ತಲೆ ಯಾವುದು, ಬಾಲ ಯಾವುದು ಅಂತ ಗೊತ್ತು ಅವನಿಗೆ! ಚಿಗುರು, ಕೊಂಬೆ, ದಿಂಡು, ಬೇರು ಹೇಗೆ ಕ್ರಮವಾಗಿ ಬಿಡಿಸಿದ್ದಾನೆ ನೋಡಿದೆಯ!"

"ಅದನ್ನ ಜ್ಞಾಪಿಸಿಕೊಳ್ಳೋಕ್ಕೇ, ತಾತ, ನಾವು ಇವತ್ತು ಮೆರವಣಿಗೆ ಹೋದದ್ದು" ಎಂದ ಮೊಮ್ಮಗ.

"ಸರಿ, ಸಂತೋಷಪ್ಪ. ದೇಶದ ಕೆಲಸ. ನಡುವೆ ಇದೊಂದು ಸಣ್ಣ ಕೆಲಸ ಇದೆಯಲ್ಲ. ನೋಡು, ಅಷ್ಟು ದಿನದಿಂದ ಹೇಳತಾ ಇದ್ದೇನೆ. ಈ ನಿಂಬೆ ಗಿಡಕ್ಕೆ ಪಾತಿ ಆಗೆದು, ನೀರು ತೋರಿಸದೆ ಹೋದರೆ ಈ ವರ್ಷ ಉಪ್ಪಿನಕಾಯಿಗೆ ಏನು ಗತಿ?"

"ಅಯ್ಯೋ! ಅದಕ್ಕೇನು, ಅಜ್ಜ, ಇಷ್ಟು ಯೋಚನೆ? ಎಲ್ಲೋ, ಎಂಕ! ಆ ಏಪ ತೆಕೊಂಡು ಬಾರೊ! ನಾಣಿ! ನೀನು ಹೋಗಿ, ಒಂದು ಬಕೆಟ್‌ನಲ್ಲಿ ನೀರು, ಒಂದು ಹಳೇಬಟ್ಟೆ ತೆಕೊಂಡುಬಾ....ತಂದಿರಾ! ಎಲ್ಲಿ, ಆ ನಿಂಬೆ ಗಿಡಕ್ಕೆ

ಏಣಿ ಹಾಕು ... ನೀಹತ್ತೊ, ಮೇಲೆ.... ನೀನು ಆ ಬಟ್ಟೆ ಒದ್ದೆಮಾಡಿಕೊಡೊ ಅವನ ಕೈಗೆ.... ತೆಕೊ ಅದನ್ನ.... ಜೋಪಾನವಾಗಿ, ಒಂದೊಂದು ಎಲೇನೂ ಎಡಗೈಲಿ ಹಿಡುಕೊಂಡು, ಬಲಗೈ ಒದ್ದೆ ಬಟ್ಟೆಯಿಂದ ಆ ಧೂಳು ಹೋಗೋ ಹಾಗೆ ಚೆನ್ನಾಗಿ ಒರಸು.... ಅವನು ಅದನ್ನ ಒರಸುತಿರಲಿ. ನೀ ಹೋಗೊ ಒಳಗೆ. ಮೇಜಿನ ಮೇಲೆ ಚಾಕು ಇದೆ, ತೆಕೊಂಡು ಬಾ. ಈ ನಿಂಬೆ ಮುಳ್ಳುಗಳನ್ನೆಲ್ಲ ಚೂಪು ಮಾಡಬೇಕು ... ಹಾಗೇನೇ ಬರುವಾಗ ಒಂದು ಸಾಕುಚೂರು ಅಮೆರಿ ಕಾಗದ ಹಿಡುಕೊಂಬಾ.... ಅದೇ ಕಾಣೊ, ಆ ಉಪ್ಪುಕಾಗದ, ಮರಳುಕಾಗದ, ಆ ಉಜ್ಜೊ ಕಾಗದ ಕಾಣೊ.... ಈ ಮರನಮೇಲಿನ ಹಳೇ ಸಿಪ್ಪೆನೆಲ್ಲ ತೆಗೆದು ಫಳಫಳ ಅಂತ.... ಹೋಗೊ ಬೇಗ.... ಇದು ಯಾಕೆ ತಾತ? ಕೆಳಗೆ ಕೂತುಕೊಂಡು ಸುಮ್ಮನೆ ಮಣ್ಣು ಕೆದಕತಾ ಇದ್ದೀಯ? ನೀ ಮಲಕ್ಕೊ ಹೋಗು. ನಾವು ನೋಡಿಕೋ ತೀವೆ ಇದನ್ನ."

ತಾತ ಮಾತಾಡಲಿಲ್ಲ. "ಮನೆತುಂಬ ಎಳೇ ನಿಂಬೇಕಾಯಿಗಳು ಸೇರಿ ಕೊಂಡರೆ, ಗಿಡದಲ್ಲಿ ಹಣ್ಣು ಹೇಗೆ ಹುಟ್ಟುತದೆ!" ಅಂತ ಗೊಣಗತಾ, ಬಗ್ಗಿದ ನಡು ಹಾಗೇ ಬಗ್ಗಿಸಿ ಕೂತುಕೊಂಡು, ಪುನಃ ತನ್ನ ಪಾಡಿಗೆ ತಾನು ಪಾತಿ ಮಣ್ಣು ಕೆದಕ ತೊಡಗಿದ.

"ಮುದುಕ ಆದರೂ, ಮೊಮ್ಮಕ್ಕಳಿಗೆ ಮನೆಯ ಜವಾಬ್ದಾರಿ ವಹಿಸೋಕೆ ಮನಸ್ಸಿಲ್ಲ ತಾತನಿಗೆ!" ಅಂತ ಮೊಮ್ಮಗ ಅಂದ, ಕೊಂಚ ಗಟ್ಟಿಯಾಗೇ.

ಮುದುಕ ತಲೆಯೆತ್ತಿ ನೋಡಿದ. ಮೊಮ್ಮಗನ ಎಡಗೈಲಿ ಇತ್ತು ಅಮೆರಿ ಕಾಗದ! ಬಲಗೈಲಿ ಇತ್ತು ಚಾಕು! ಮುದುಕ, ಮಣ್ಣು ಕೆದಕತಾನೇ ನಿಟ್ಟುಸಿರು ಬಿಟ್ಟ.

—o—

ಈಗಿನ ಪರಿಸ್ಥಿತಿಯಲ್ಲಿ, ಅಡಿಗೆಯವರೇ ಮನೆ ಮಾಲೀಕರನ್ನು ಗೊತ್ತು ಮಾಡಿಕೊಳ್ಳುತ್ತಿದ್ದಾರಂತೆ.

* * *

ಚುನಾವಣೆ ಪ್ರಕಟಣೆಗಳನ್ನೆಲ್ಲಾ ಒಟ್ಟುಗೂಡಿಸಿ ಪ್ರಾಕ್ತನ ಪುಸ್ತಕ ಭಂಡಾರದಲ್ಲಿಡುತ್ತಾರಂತೆ.

—ಮುಂದಿನ ಜನಾಂಗದವರು, ನಾವು ಪಡಬೇಕಾದ ಕಷ್ಟನಿಷ್ಠುರಗಳನ್ನೆಲ್ಲಾ ತಿಳಿಯುವಂತೆ ಮಾಡಲು ಇದು ಒಳ್ಳೆಯ ಉಪಾಯ.

* * *



ಎಂಜಲೆಲೆ ನೆಕ್ಕುವ ನಾಯಿ :

“ಈ ಯುದ್ಧ ಯಾವಾಗಪ್ಪ ನಿಲ್ಲುತ್ತೆ ...!!”

ಸೋಮಣ್ಣನ ಚುನಾವಣೆ ಜಾಹಿರಾತು

ಯಾರಿಗೆ ವೋಟ್ ?

ಸೋಮಣ್ಣನಿಗೆ !!

ಅಯಿಲುನಗರದ ವೋಟರು ಮಹನೀಯರಲ್ಲಿ ವಿಜ್ಞಾಪನೆಗಳು:

ಮಹಾಶಯರೆ !

ನಾನು ಈಗ ಹಲವಾರು ವರ್ಷಗಳಿಂದ ಮುಂದೆ ಬಂದು ಸ್ವಜನಸೇವೆಯೋ ಸ್ವಸೇವೆ, ಸ್ವಸೇವೆಯೋ ಸ್ವದೇಶ ಸೇವೆ, ಸ್ವದೇಶ ಸೇವೆಯೋ ಸ್ವದೇವ ಸೇವೆ ಯೆಂಬ ಘನ ಧ್ಯೇಯವನ್ನು ಮುಂದಿಟ್ಟುಕೊಂಡು "ಆತ್ಮವೇ ದೈವನು, ದೈವವೇ ಆತ್ಮನು, ಬೇಧವಿಲ್ಲ ! ಬೇಧವಿಲ್ಲ !! ಬೇಧವಿಲ್ಲ !!! ಎಂಬ ಉಪನಿಷದ್ಮಹಾವಾಕ್ಯದ ಬೆಳಕಿನಲ್ಲಿ ಸ್ಥಳೀಯ ಸಂಸ್ಥೆಗಳು, ಸಹಕಾರ ಸಂಘಗಳು ಇವೇ ಮುಂತಾದುವಲ್ಲಿ ಸಮಯೋಚಿತವಾಗಿ ಸಿಕ್ಕಿದವಕಾಶಗಳನ್ನು ಸದುಪಯೋಗಪಡಿಸಿಕೊಳ್ಳುತ್ತಾ ದೈವಸೇವಾಸಕ್ತನಾಗಿರುವುದನ್ನು ತಾವೆಲ್ಲರೂ ಅರಿತೇ ಇರುವಿರಿ !

ಈಗ ಇನ್ನೂ ಹೆಚ್ಚು ಹೆಚ್ಚು ಸೇವೆಯನ್ನು ಹೆಚ್ಚು ಹೆಚ್ಚು ವಿಶಾಲವಾದ ಕ್ಷೇತ್ರಗಳಲ್ಲಿ ಅರ್ಪಿಸಬೇಕೆಂಬ ಬಲವಾದ ಆಶೆಯು ನನ್ನನ್ನು ಹೆಚ್ಚು ಹೆಚ್ಚು ಬಾಧಿಸುತ್ತಿರುವುದರಿಂದ ಈಗ ಬರಲಿರುವ ಮಹಾ ಚುನಾವಣೆಗಳಲ್ಲಿ ತಮ್ಮ ಬೆಂಬಲವನ್ನು ಹೆಚ್ಚು ಹೆಚ್ಚಾಗಿ ನನಗೇ ನೀಡಬೇಕೆಂದು ಈ ಮೂಲಕ ಪ್ರಾರ್ಥಿಸುತ್ತೇನೆ.

ದೇಶದ ಆದಾಯಗಳನ್ನು ಯಾವರೀತಿಯಲ್ಲಿ ಹೆಚ್ಚು ಮಾಡುವುದು, ಹೆಚ್ಚು ಮಾಡಿ ಯಾವ ರೀತಿಯಲ್ಲಿ ದೈವಸಮರ್ಪಕವಾಗಿ ಉಪಯೋಗಪಡಿಸಿಕೊಳ್ಳುವುದು ಎಂಬುದೇ ನನ್ನ ಉದಾತ್ತ ಗುರಿಯು. ಸಮಯಬಿದ್ದಂತೆಲ್ಲಾ ತಮ್ಮ ಹೆಸರಿನಲ್ಲಿ ಈ ಧ್ಯೇಯಕ್ಕಾಗಿ ಹೋಡೆದಾಡುತ್ತೇನೆಂಬುದನ್ನು ಒತ್ತಿ ಹೇಳುತ್ತೇನೆ. ರೈತರು ಮತ್ತು ಹಿಂದುಳಿದವರು—ಇವರ ಹಿತರಕ್ಷಣೆಯಲ್ಲಿ ಬದ್ಧಕಂಕಣನಾಗಿದ್ದೇನೆ. ಇದಕ್ಕಾಗಿ ಅರ್ಹೇತರನ್ನೂ ಮುಂದಿರುವವರನ್ನೂ ಹೋರಾಡಿ ಸದೆಬಡಿದು ನಿರ್ಮೂಲ ಮಾಡಲು ಕಾತುರನಾಗಿದ್ದೇನೆಂದರೆ ಅತಿಶಯೋಕ್ತಿಯಾಗಲಾರದು !

ಅಧಿಕಾರಸ್ಥಾನವೊಂದನ್ನು ತಮ್ಮ ಪರವಾಗಿ ಆಕ್ರಮಿಸಬೇಕೆಂಬ ಮಹತ್ತರವಾದ ಆಕಾಂಕ್ಷೆಯನ್ನು ಈ ಮೂಲಕ ವ್ಯಕ್ತಪಡಿಸುತ್ತೇನೆ. ಇದರಲ್ಲಿ ಸಫಲವಾದರೆ ಬೆಳ್ಳಿ ಕಟ್ಟಿಗೆಗೆ ಚಿನ್ನದ ಮೆರಗು ಕೊಡಿಸಿ, ಮೋಹಿತ ಸ್ಥಾನಮಾನಗಳನ್ನು ಆದಷ್ಟು ಹೆಚ್ಚಿಸಿಕೊಂಡು ಬೆಂಬಲವಿತ್ತ ತಮ್ಮೆಲ್ಲರಿಗೂ ಕೀರ್ತಿಯನ್ನು ತರುತ್ತೇನೆಂದು ಪ್ರಮಾಣ ಮಾಡುತ್ತೇನೆ ! ಮತ್ತು ತಂತ್ರವಿಶಾರದ ಮುಂತಾದ ಬಿರುದು

ಬಾವಲಿಗಳನ್ನು ಎರಡು ಮೂರು ವರ್ಷಗಳ ನಂತರವಲ್ಲದೆ ಆರೇ ತಿಂಗಳುಗಳಲ್ಲಿ ಗಳಿಸುತ್ತೇನೆಂಬ ಭರವಸೆಯನ್ನು ನೀಡುತ್ತೇನೆ.

ಈ ಸಂದರ್ಭದಲ್ಲಿ ನಾನು ಇದುವರೆಗೆ ನಡೆಸಿದ ಸಂಸ್ಥೆಗಳಲ್ಲಿ ಕಂಡುಬಂದ ಲೋಪದೋಷಾದಿಗಳನ್ನು ಮರೆತುಬಿಡಬೇಕೆಂದು ಪ್ರಾರ್ಥಿಸುತ್ತೇನೆ. ಹೋದಸಲದ ಲಂಚ ರುಷುವತ್ತಿನ ಅಪಾದನೆಯು ಬುಡವಿಲ್ಲದುದೆಂಬದಾಗಿಯೂ, ಅದಕ್ಕೆ ಹಿಂದಿನ ಸಲದ ಸುಳ್ಳುಲೆಕ್ಕದ ಅಪಾದನೆಯು ಕೋರ್ಟಿಗೇ ಬರಲಿಲ್ಲವೆಂಬಂಶವನ್ನು ತಮ್ಮ ಗಮನಕ್ಕೆ ತರಲು ವಿನಯಪೂರ್ವಕವಾಗಿ ಬೇಡುತ್ತೇನೆ.

ತಮ್ಮ ಘನವಾದ ವೋಟನ್ನು **ರಂಧ ಮತ್ತು ಕತ್ತರಿ** ಅಂಕಿತವುಳ್ಳ

ನನಗೇ ಕೊಡಬೇಕೆಂದು ಪ್ರಾರ್ಥಿಸುವ,

ತಮ್ಮ ವಿಧೇಯ,
ಕ. ಸೋಮಣ್ಣ.

ಜಾಹಿರಾತಿನ ಪ್ರತಿಯೊಂದನ್ನು ಸೋಮಣ್ಣನು ನನಗೆ ತೋರಿಸಿ 'ಹೇಗಿದೆ?' ಎಂದನು. "ಇದರ ವಿಚಾರ ನನಗೆ ಅಷ್ಟಾಗಿ ಗೊತ್ತಿಲ್ಲವಪ್ಪಾ. ಆದರೂ ನೀನು ಕೇವಲ ಯತಾರ್ಥವಾದಿ ಎಂದು ಮಾತ್ರ ಹೇಳಬಲ್ಲೆ" ಎಂದೆ.

"ಹೌದು ಯಾವಾಗಲೂ ಸತ್ಯವನ್ನು ಬಿಡಬಾರದು, ನೋಡು! ಸತ್ಯವೇ ನಮ್ಮ ತಾಯಿತಂದೆ ಸತ್ಯವೇ ನಮ್ಮ—"

"ಸರಿ ಬಿಡು, ನಾನು ಅದನ್ನು ಕೇಳಿಬಲ್ಲೆ...... ಈ ಹಸ್ತಪತ್ರಿಕೆಗಳಲ್ಲದೆ ಚುನಾವಣೆ ವಿಷಯದಲ್ಲಿ ಮತ್ತೇನು ಏರ್ಪಾಟು ಮಾಡಿರುವೆ?"

'ತಿಳಿದೇ ಇದೆಯಲ್ಲ! ವೋಟುದಾರರಿಗೆಲ್ಲರಿಗೂ ಬೆಳಗ್ಗೆ ತಿಂಡಿ ಕಾಫಿ, ಮಧ್ಯಾಹ್ನ ಈರುಳ್ಳಿಬೇಳೆ ಹುಳಿ, ಹೀರೆಕಾಯಿ ಬೋಂಡ ಇವುಗಳ ಭೋಜನ, ಸಾಯಂಕಾಲ ಟೀ, ರಾತ್ರಿಗೆ ಉಪಹಾರ ಮತ್ತು ಸಿನೀಮಾ—ಮತ್ತು, ಇದು ಗುಟ್ಟು, ಕಂಡೆಯಾ? ತಲಾ ಒಬ್ಬೊಬ್ಬರಿಗೂ ಒಂದೊಂದು ಶುಭ್ರ ದಕ್ಷಿಣೆ! ಹೇಗೆ!

'ಇಷ್ಟೆಲ್ಲಾ ಖರ್ಚುಮಾಡಿ ಕಡೆಗೆ ಗೆಲ್ಲದೆ ಹೋದರೆ?"

"ಖಂಡಿತ ಗೆಲ್ಲುತ್ತೇನೆ. ಒಂದುವೇಳೆ ಗೆಲ್ಲದಿದ್ದರೆ ಅದಕ್ಕೂ ಏರ್ಪಾಡಿದೆ. ನಮ್ಮ ತಿಮ್ಮಣ್ಣನು ಹೇಗಿದ್ದರೂ ಮತ್ತೊಂದು ಕ್ಷೇತ್ರದಿಂದ ಸ್ಪರ್ಧೆಯಿಲ್ಲದೆ ಚುನಾಯಿತನಾಗಿದ್ದಾನೆ. ಅವನಿಂದ ರಾಜೀನಾಮೆ ಕೊಡಿಸಿ (ಅವನು ನನಗೆ ಕೊಡಬೇಕಾದ ಒಂದು ಸಾವಿರ ರೂಪಾಯಿನ ಸಾಲ ಪತ್ರವನ್ನು ಹರಿದು ಹಾಕಿದರೆ ಸಾಕು, ಅವನು ಏನುಬೇಕಾದರೂ ಮಾಡಲು ಸಿದ್ಧ!) ಆ ಸ್ಥಾನದಲ್ಲಿ ಉಪಚುನಾ

ವಣೆಗೆ ನಿಲ್ಲುವುದು ! ಏನೂ ಯೋಚಿಸಬೇಡ, ಈ ರೀತಿ ಚಾಣಕ್ಯತಂತ್ರಗಳನ್ನನೇಕ ವಾಗಿ ಯೋಚಿಸಿಟ್ಟಿದ್ದೇನೆ !.... ಈಗ ಮುಖ್ಯ ಬೇಕಾಗಿರುವುದು ನಿನ್ನ ಸಹಾಯ"!

"ನನ್ನ ಸಹಾಯವೆ! ನಾನೇನು ಸಹಾಯಮಾಡಬಲ್ಲೆ ? ನನಗಿರುವುದು ಒಂದು ವೋಟು, ಅದು ನಿನ್ನಂತವರಿಗಲ್ಲದೆ ಮತ್ಯಾರಿಗಯ್ಯಾ !"

ಹಾಗಲ್ಲ ನೋಡು, ಈ ಹಸ್ತಪತ್ರಿಕೆಗಳು ಜಟಕಾ, ಬಸ್ಸುಗಳ ಮೇಲಿನ ಜಾಹೀರಾತುಗಳು ಇವು ಇಷ್ಟೇಸಾಲದು ಚುನಾವಣೆಗೆ ನಿಂತಿರುವವರೆಲ್ಲರೂ ಈ ರೀತಿ ಮಾಡುವುದರಿಂದ ಜನಗಳ ಮನಸ್ಸಿನಲ್ಲಿ ಯಾರೊಬ್ಬರ ಉಮೇದುವಾರಿಕೆಯೂ ಮನಸ್ಸಿಗೆ ನಾಟುವುದಿಲ್ಲ. ಇದಕ್ಕೆ ಅನೇಕ ಜನರು ಆದರದಿಂದ ಓದುವ ಯಾವುದಾದರೂ ಪತ್ರಿಕೆಯೊಂದರಲ್ಲಿ ನಮ್ಮ ಜಾಹಿರಾತು ಬರಬೇಕು. ಆದರೆ ಪತ್ರಿಕೆ ನಡೆಸುವವರೊಬ್ಬೊಬ್ಬರೂ ತಾವೇ ಚುನಾವಣೆಗೆ ನಿಲ್ಲುವ ಅಭ್ಯಾಸ ವಿರುವುದರಿಂದ ಇತರರ ಜಾಹಿರಾತಿಗೆ ಅವರ ಪತ್ರಿಕೆಗಳಲ್ಲಿ ಅಷ್ಟಾಗಿ ಸ್ಥಳ ಸಿಕ್ಕುವುದಿಲ್ಲ. ಈಗ ನಿನಗಾದರೂ ಪತ್ರಿಕಾ ಸಂಪಾದಕರನೇಕರು ಗೊತ್ತು. ಜನಾದರಣೀಯವಾಗಿ ಎಲ್ಲರೂ ಆಸಕ್ತಿಯಿಂದ ಓದುವ ಯಾವುದಾದರೂ ಪತ್ರಿಕೆಯಲ್ಲಿ ನನ್ನ ಜಾಹಿರಾತಿಗೆ ಎಡೆ ಕೊಡಿಸಬೇಕು ಇಷ್ಟೇ ನನ್ನ ಪ್ರಾರ್ಥನೆ."

ನಾನು ಆಗಲಿ ಎಂದು ಮಾತು ಕೊಡುವವರೆಗೂ ಸೋಮಣ್ಣನು ಬಿಡಲೇ ಇಲ್ಲ.

ಕೊರವಂಜಿ ಸಂಪಾದಕರಲ್ಲಿ ವಿಜ್ಞಾಪನೆಗಳು,

ನಮ್ಮ ಸೋಮಣ್ಣನ ಒತ್ತಾಯದಪ್ರಕಾರ ಎಲ್ಲರೂ ಓದುವ, ಜನಾದರಣೀಯವಾಗಿರುವ ಮತ್ತು ನಮ್ಮ ಸೋಮಣ್ಣನ ಜಾಹೀರಾತಿಗೆ ತಕ್ಕಂಥ ಪತ್ರಿಕೆ ಯಾವುದೆಂದು ಯೋಚನೆಮಾಡಿ, ಕೊನೆಗೆ ತಮ್ಮ ಕೊರವಂಜಿಯೇ ಸರಿಯಾದುದೆಂದು ಮೇಲೆ ಕಂಡ ಸೋಮಣ್ಣನ ಚುನಾವಣೆ ಜಾಹಿರಾತನ್ನು ತಮಗೆ ಕಳುಹಿಸಿದ್ದೇನೆ. ದಯವಿಟ್ಟು ಅದಕ್ಕೆ ಸ್ವಲ್ಪ ಸ್ಥಳಕೊಡಬೇಕಾಗಿ ಪ್ರಾರ್ಥನೆ. ಇದಕ್ಕೆ ತಮಗೆ ಯಾವ ವಿಧವಾದ ದಕ್ಷಿಣೆಯೂ ದೊರೆಯಲಾರದು. ಅದಕ್ಕೆ ಬದಲು, ಇಂತಹ ಅತ್ಯುತ್ತಮ ಉಮೇದುವಾರಿಕೆಗೆ ಬೆಂಬಲ ಕೊಡುವ ಅವಕಾಶವನ್ನು ತಮಗೆ ಕಲ್ಪಿಸಿ ಕೊಟ್ಟಿದ್ದಕ್ಕಾಗಿ ತಮ್ಮಿಂದಲೇ ಬಹುಮಾನವನ್ನು ನಿರೀಕ್ಷಿಸುವ.

ತಮ್ಮ ವಿಶ್ವಾಸಿ
ಬೀರಣ್ಣ.

[ಚುನಾವಣೆಗಿಂತ ಮುಂಚೆ ಇದನ್ನು ಪ್ರಕಟಿಸುವುದಕ್ಕಿಂತಲೂ, ಚುನಾವಣೆಯಾದ ಮೇಲೆ ಪ್ರಕಟಿಸುವುದೇ ಲೇಸು—ಸುರಕ್ಷಿತ. ಸಂ.]

ಧರ್ಮಮೂರ್ತಿ

ರಾಮಣ್ಣನವರಿಗೆ ಮೊನ್ನೆ ಧರ್ಮಮೂರ್ತಿ ಎಂಬ ಬಿರುದು ಬಂತಲ್ಲ. ಅದರಿಂದೀಚೆಗೆ ಆದ ಸಮಾಚಾರ ಕೇಳಿಲ್ಲವೇನು ನೀವು? ಹಸುವಿನ ಗುಡಿಯಲ್ಲಿ ಅವರಿಗೆ ಸೇರಿದ್ದ "ಕಾಶಿರಾಯನ ವಠಾರ" ದಲ್ಲಿರುವ ಹನ್ನೆರಡು ಮನೆಗಳಲ್ಲೂ ಕೇವಲ ಬಡ ಮೇಷ್ಟರುಗಳೂ ಗುಮಾಸ್ತೆಯರೂ ವಾಸವಾಗಿದಾರೆ, ಅವರಿಂದ ತಲಾ ಎಂಟೆಂಟು ರೂಪಾಯಿ ಬಾಡಿಗೆ ವಸೂಲುಮಾಡುವುದೇ ನಕ್ಷತ್ರೀಕತನ, ಎಂದು ಅವರಿಗೆ ತೋರಿತು. ಕೂಡಲೇ ರಾಮಣ್ಣನವರು ತಮ್ಮ ಮ್ಯಾನೇಜರನ್ನು ಕರೆದು, ವಠಾರದ ಮನೆಗಳಿಗೆಲ್ಲ ಆರೇ ರೂಪಾಯಿ ಬಾಡಿಗೆ, ಮುಂದಿನ ತಿಂಗಳಿಂದ, ಎಂದು ಹೇಳಿದರು. ಪಾಪ, ಆತನಿಗೆ ತಲೆಯಮೇಲೆ ಸಿಡಿಲು ಬಿದ್ದಂತಾಯಿತಂತೆ. ಲೋಕವೇ ತಲೆಕೆಳಗಾದಹಾಗಾಯಿತಂತೆ

"ನನ್ನ ಬಾಯಿಂದ ಈ ಹಾಳುಸುದ್ದಿ ಹೊರಡುವಂತಾಯಿತೆ"? ಎಂದು ಅವರು ತಲೆ ಚಚ್ಚಿಕೊಂಡರು. ತಮ್ಮ ಮನೆಗೆ ಹೋಗಿ, ಮಡದಿಗೆ ಹೇಳಿದರು. ಆಕೆ "ಎಲ್ಲಾದರೂ ಉಂಟೆ!" ಎಂದು ಗಲ್ಲದಮೇಲೆ ಬೆರಳಿಟ್ಟಳು. ರಾಮಣ್ಣನವರು ಎಲ್ಲೆಲ್ಲಿಗೆ ಹೋಗಿದ್ದರು, ಯಾವ ಯಾವ ಕಡೆ ಅವರಿಗೆ ವಾಕ್ಷೇಪು ಆಯಿತು, ಎಂದೆಲ್ಲ ವಿಚಾರಿಸಿದಳು.

ಬೆಳಗಾಗುತ್ತಲೂ ಮ್ಯಾನೇಜರೆದ್ದು ಗಂಟಲು ಸರಿಪಡಿಸಿಕೊಂಡು, ವಠಾರಕ್ಕೆ ಹೋಗಿ, ಮಾರ್ಚಿ ತಿಂಗಳಿಂದ ನೀವೆಲ್ಲ ಎರಡೆರಡು ರೂಪಾಯಿ ಕಮ್ಮಿ ಕೊಡಿ, ಸಾಕು, ರಾಮಣ್ಣನವರ ಆರ್ಡರ್ ಆಗಿದೆ, ಎಂದರು. ಅಲ್ಲಿ ನಿಲ್ಲದೆ ಹೊರಟು ಬಂದರು.

ಬಾಡಿಗೆದಾರರೆಲ್ಲ ನಲ್ಲಿ ಸುತ್ತ ಸೇರಿದರು. ಆಶ್ಚರ್ಯ, ಅಸಂದರ್ಭ, ಅನ್ಯಾಯ, ಅನಾಹುತ, ಅಸಂಬಂಧ—ಎಂದು ಟೀಕಿಸಿದರು. ಮ್ಯಾನೇಜರದೇ ಕುತಂತ್ರ, ಒಳಗುಟ್ಟು ಏನೋ ಇರಬೇಕು, ನಿಧಾನವಾಗಿ ವಿಚಾರಮಾಡಬೇಕಾದದ್ದು, ಎಂದು ಅನುಮಾನಿಸಿದರು. ಶಾಲೆಗಳಿಗೂ ಕಚೇರಿಗಳಿಗೂ ಹೊರಟರು.

ಮಧ್ಯಾಹ್ನ ಮಹಿಳೆಯರು ಊಹಿಸಿದರು; ಪೂಹಿಸಿದರು. ಬಿರುದು ಬಂದರೆ ಬುದ್ಧಿ ಹೋಗುತ್ತದೆಯೋ, ಎಂದು ಕೇಳಿದರು ಒಬ್ಬರು. ರಾಮಣ್ಣನವರು ಯಾವುದೋ ಮಹಾಪಾತಕ ಮಾಡಿರಬೇಕು, ಅವರ ಜೋಯಿಸರು ಗೃಹದಾನ ಮಾಡಬೇಕು ಎಂದು ಹೇಳಿರುತ್ತಾರೆ, ಮನೆಕೊಟ್ಟ ಪುಣ್ಯ ಬರಲಿ ಎಂದು ಬಾಡಿಗೆ

ಇಳಿಸಿದಾರೆ,—ಎಂದರು, ಮತ್ತೊಬ್ಬರು. ಅಂಥ ಪಾಪಿಗಳ ಮನೆಯಲ್ಲಿರಬಹುದೇ, ಎಂದು ಕೇಳಿದರೊಬ್ಬರು. ಮನೆ ಗೋಡೆಗಳು ಬೀಳುವುದರಲ್ಲಿದೆಯೋ ಏನೋ, ತೇವ ಹತ್ತಿದೆಯೋ ಏನೋ, ಸೂರು ಬೀಳುತ್ತದೋ ಏನೋ, ಹೆಂಚು ಕಿತ್ತು ಕೊಂಡು ಹೋಗುತ್ತಾರೋ ಏನೋ, ಕಿಟಕಿ ಬಾಗಿಲುಗಳನ್ನೆಲ್ಲ ಸಾಗಿಸಿಬಿಡು ತ್ತಾರೆ, ನಲ್ಲಿ ನಿಲ್ಲಿಸುತ್ತಾರೆ, ಎಮ್ಮೆ ಕಟ್ಟುತ್ತಾರೆ, ಲಾರಿಗಳು ತಂದು ನಿಲ್ಲಿಸುತ್ತಾರೆ, ಇಲಿ ಬಿದ್ದಿದೆ, ಎಂದೆಲ್ಲ ಊಹಿಸಿದರು, ಹಲವರು.

ಕಡೆಗೆ ಒಬ್ಬರು. "ದೆವ್ವ", ಅಂದರು. ರಾತ್ರಿ ಹೊತ್ತು ಬಾಗಿಲುಗಳು ಗಡಗಡ ಸದ್ದುಮಾಡುತ್ತವೆ, ಅಟ್ಟದಮೇಲೆ ಗಣಗಣ ಅಂತ ಓಡಾಡುತ್ತದೆ, ಒಬ್ಬರೂ ಬಿಟ್ಟು ಹೋಗದಿರಲಿ, ಬಂದಷ್ಟು ಬರ್ತಿರಲಿ, ಆದಷ್ಟು ದಿನ ಅಂತ ಈ ಉಪಾಯ ಹೂಡಿದಾರೆ—ಎಂದು ಸುಬ್ಬಕ್ಕನವರು ವಾದಿಸಿದರು. ಅದನ್ನೇ ಎಲ್ಲರೂ ತಮ್ಮ ತಮ್ಮ ಅನುಭವದಿಂದ ಸಾಧಿಸಿದರು.

ಸಂಜೆ ಗಂಡಸರು ಬಂದರು. ಹೆಂಗಸರ ಹೆದರಿಕೆ ಅವರಿಗೂ ಹತ್ತಿತು. ಬೆಳಗ್ಗೆ ಮೇಷ್ಟ್ರು ಮಾಧವರಾಯರು ತನ್ನ ಬಸುರಿ ಹೆಂಡತಿಯನ್ನು ಮೆಲ್ಲಗೆ ತವರು ಮನೆಗೆ ರವಾನಿಸಿದರು. ಜೊತೆಯಲ್ಲೇ ತಿಮ್ಮಣ್ಣನವರ ತಾಯಿ, ಮಕ್ಕಳು. ಹೊರಟರು. ಮಧ್ಯಾಹ್ನ ಪೈಲಾರಯ್ಯನ ಮುದಿತಾಯಿ ಕೃಷ್ಣಾಜಿನ ಸಹಿತ ಮುಳ ಬಾಗಿಲಿಗೆ ಬಸ್ ಹತ್ತಿದರು. 'ಆ ಮುದುಕಿಗೆ ಜೀವದಮೇಲೆ ಅಷ್ಟು ಆಸೆಯಾದರೆ, ನಮಗೇನು ಬಾಳಿ ಬದುಕುವ ಹಂಬಲೇ ಇಲ್ಲವೆ?" ಅಂತ ಉಳಿದ ಮನೆಗಳ ಸೊಸೆಯರೂ ರೈಲು ಹತ್ತಿದರು. ವಠಾರ ಖಾಲಿ ಆಯಿತು.

ಮಾರನೆಯ ದಿನ ವಠಾರದ ಹೊರಬಾಗಿಲಲ್ಲಿ "ಖಾಲಿ ಮನೆಗಳಿವೆ—ಬಾಡಿಗೆಗೆ" ಎಂಬ ಬೋರ್ಡು ತೂಗಿತು...............

ಈಗಲೂ ತೂಗುತ್ತಿದೆ. ರಾತ್ರಿ ಗಾಳಿಗೆ ಅದು ಗಡಗಡ ಅಂತ ಗೋಡೆಗೆ ಬಡಿವಾಗ, ನೆರೆಮನೆಯವರು 'ದೆವ್ವ' ಅಂತ ನಡುಗುತ್ತಿದಾರೆ.

—ನಾ. ಕ.

ಪ್ರಸಿದ್ಧ ಕವಿಯೊಬ್ಬನು ಬೇಕಾದಷ್ಟು ಸಂಪಾದಿಸಿದ್ದಾನಂತೆ.
—ವಿರಾಮಕಾಲದಲ್ಲಿ ಸೈನ್ಯದ ಸರಬರಾಜು ಮಾಡುತ್ತಿದ್ದನಂತೆ.



ಕೆಲವು ಸಿನಿಮಾಗಳು ಮುಗಿದರೂ ಸಿನಿಮಾ ಮಂದಿರದೊಳಗೆ
ಬಹಳ ಜನರಿರುತ್ತಾರೆ.

ಎಲ್ಲಿದೆ?

ಯಾರನು ಕೇಳಲಿ ನಾ, ಸ್ವರಾಜ್ಯ ಎಲ್ಲೆಂದು
ಯಾರನು ಕೇಳಿದರರಿಯೆನು, ಎಂಬರು,
ಯಾರೂ ಅರಿಯರು ಈ ವಿಷಯ!

ಕೇಳಲು ನಾನಾ ಚರ್ಚಿಲನು
ಕೇಳೆಂದಮೆರಿಯ ತೋರಿದನು!
ಕೇಳಲು ಘಾರಿಂ ಕ್ರಿಪ್ಸನನು
ಕಾಗದ ತುಂಡನು ತೋರಿದನು!
ಕೇಳಲು ಯೂ. ಎಸ್. ಪ್ರೆಸಿಡೆಂಟ—
"ಕಡಲಿನ ತಳದಲಿ ನೀ ಹುಡುಕು"
ಎನ್ನುತ ಗಹಗಹ ನಕ್ಕನವ!
ಕೇಳಲು ವೇವಲ್ 'ತಾನರಿಯ'!
ಕೌನ್ಸಿಲ್ಲರುಗಳ ನಾ ಕೇಳೆ
ಸಪ್ರುವ ಕೇಳೆಂದೊರಲುವರು!
ಗಾಂಧಿಯ ಕೇಳಲು, ಮೌನದಲಿ,
ಚರಕವ ತಿರುಗಿಸು ನೀನೆಂದ,
ಜಿನ್ನನ ಕೇಳಲು ಮಾತಿಲ್ಲ,
ನೆಹರೂ ಜೈಲಲಿ, ನುಡಿ ಇಲ್ಲ,
ಕೇಳೆ ರಾಜಗೋಪಾಲನ ನಾನು
ಪರಿಪರಿ ಕಥೆಗಳೆ ಮರುಮಾತು.
ಹೃದಯವ ಕೇಳಲು, "ಸುಮ್ಮನಿರು!
ಇಲ್ಲೇ, ಈಗಲೆ" ಎನ್ನುವುದು.

ಯಾರನು ಕೇಳಲಿ ನಾ, ಸ್ವರಾಜ್ಯ ಎಲ್ಲೆಂದು
ಯಾರನು ಕೇಳಿದರರಿಯೆನು, ಎಂಬರು,
ಯಾರೂ ಅರಿಯರು, ಈ ವಿಷಯ.

ಎಂಥದ್ದು ?

ಯಾರನು ಕೇಳಲಿ ನಾ, ಸ್ವರಾಜ್ಯ ಎಂಥದ್ದು ?
ಯಾರನು ಕೇಳಿದರೊಂದನೆ ಪೇಳುವ
ರಾರೂ ಅರಿಯರು ಈ ವಿಷಯ !

ಶಾಂತಿಯದೆಂಬರು ಗಾಂಧಿಗಳು !
ಕ್ರಾಂತಿಯೆ ಎಂಬರು ಯುವಕಜನ !
ಭ್ರಾಂತಿಯೆ ಎಂಬರು ಬಿಳಿಯುವಳು !
ಅಹುದೆಂಬರು ಐ ಸೀ ಎಸರು !
ಮೋದಿಯ ಕೇಳಲು ಕಾರ್ಖಾನೆ
ಸಾಲಲಿ ಹೊಗೆಯನು ಕಾರುವುದು !
ವಾರ್ಧವ ಕೇಳಲು ಹಳ್ಳಿಗಳು
ನಲಿಯುತ ಬಿಸಿಲಲಿ ಮೆರೆಯುವುವು !
ನಾಕವೆ ಎಂಬರು ಬಿವರಲಿ ಬಂದ
ಮೂಕರು ಕೂಲೀ ರೈತ ಜನ !
ನರಕವೆ ಎಂಬನು ಬೆವರಲಿ ನಿಕಲಾಸ್
ಗರಗರ ಪುಟಪುಟ ವಿಷಕಾರಿ ?
ಈಗೇನಾಗಿದೆ ! ಈ ಸುಖ ಸಾಲದೆ ?
ಎಂಬರು ಡಿಲ್ಲಿಯ ಮೊಗಲ ದಳ !
ಮುಸಲರ ಕೇಳಲು ಇಬ್ಭಾಗ !
ಹಸುಗಳು ಎಂಬನು ಲಿನ್‌ಲಿತ್‌ಗೋ !
ಡೊಮಿನಿಯನೆಂಬರು ಸಪ್ರುಗಳು
ಹೊರಡಿರಿ, ಎಂಬನು ಸ್ಮಟ್ಸ ಪ್ರಭು !
ಸತ್ಯವ ಹಿಂಸೆಯು ಶುದ್ಧವೃತಾ
ನೆಂಬುವುವಾಗಮ ವೇದಾಂತ
ಶಕ್ತಿಯೆ ಮುಕ್ತಿಯು ಎನ್ನುವುದು
ತ್ಯಾಗವೆ ಶಕ್ತಿಯು ಎನ್ನುವುದು
ಯಾರನು ಕೇಳಲಿ ನಾ, ಸ್ವರಾಜ್ಯ ಎಂಥದ್ದು ?
ಯಾರನು ಕೇಳಿದರೊಂದನೆ ವೇಳುವ
ರಾರೂ ಅರಿಯರು, ಈ ವಿಷಯ.

[ಕುವೆಂಪುರವರ ಕೊಳಲದನಿಯನನುಸರಿಸಿ ಮಾಡಿದದ್ದು.]



"ಪಕ್ಕದ ಮನೆಯವರನ್ನ ಬೈತೀರಲ್ಲಾ ; ನೋಡಿ, ಅವರೇ ಡಾಕ್ಟರ್ರಿಗೆ ಹೇಳಿ ಕಳಿಸಿದಾರಂತೆ, ಬೆಳಿಗ್ಗೆ. ರಾತ್ರಿಯಲ್ಲಾ ನಿಮಗೆ ಬಹಳ ಕೆಮ್ಮುಂತ, ಪಾಪ,

ಮುಂದೆ?

೧

ಓಟು ತುಂಬಿತು, ಸೀಟು ಬಂದಿತು.
ಹರುಷ ಜನತೆಗೆ ಲಭಿಸಿತೆ?
ಅವರ ಆಸೆಯೊಳೊಂದು ಫಲಿಸಿತು.
ಇವರ ವೇದನೆ ತೀರಿತೆ?

೨

ಜನರು ಬಂದರು, ಹಾರ ತಂದರು.
ಜಗದ ದುಗುಡವು ತೊಲಗಿತೆ?
ಮೆಂಬರೆಂದರು, ತುಂಬ ತಿಂದರು.
ಮಂದಿ ಹಸಿವು ತಣಿಯಿತೆ?

೩

ಸಭೆಯು ಸೇರಿತು, ಸಾಲು ಕೂತರು.
ನಾಡು ಸ್ತಿಮಿತದಿ ಕೂರದೆ?
ಜಗನಮೋಹನ ತುಂಬಿ ಭಾಷಣ—
ಬರಿಯ ಭೀಷಣ ದೂಷಣ?

೪

ಹುಲಿಯು ಚರ್ಮವ ಸುಲಿದು ಹಸುವಿನ
ಸಾಧು ಚರ್ಮವನುಟ್ಟರೂ,
ಹೊರಗೆ ಹಲವರು ಹೊಸತು ಕಂಡರೂ,
ಕೊಳೆತ ಹಳೆತನಹೋಯಿತೆ?

೫

ಕಳಗಳಲ್ಲಿಯು ಕದನ ಮುಗಿಯಿತು.
ವಿಜಯ ಗಳಿಸಿ ಮೆರೆದರು.
ಮನದ ಕೊಳಚೆಯ ಕದಡು ತಿಳಿಯಿತೆ?
ನಾಡ ಬಡತನ ಹರಿಯಿತೆ?

[ವಿ. ಸೀ. ಯವರ "ವರುಷಹೋಯಿತು" ಎಂಬಂತೆ]

ಬನ್ನಿ, ನಮ್ಮ ಮನೆಗೆ!

ಅಂತ ಹೇಳಿದ್ದರು, ಕಾವೇರಮ್ಮನವರು. ಕಾವೇರಮ್ಮನವರಿಗೆ ನಮ್ಮೂರಿಂದ ವರ್ಗ. ಅವರ ಗಂಡ ಆಗಲೇ ಹೋಗಿ ಚಾರ್ಜು ವಹಿಸಿಕೊಂಡಿದ್ದರು. ಅಂಥವರು 'ಬನ್ನಿ' ಅಂತ ಆಹ್ವಾನಿಸಿದರೆ, ಅವರ ಸ್ವೀಕಾರವನ್ನು ಮುಂದುವರಿಸಲಾಗುತ್ತದೆಯೇ? ನಾವು ನಾಲ್ಕು ಜನರೂ ಒಟ್ಟಿಗೆ ಹೊರಟು, ಮರುದಿನವೇ ಅವರ ಭೇಟಿ ತೆಗೆದುಕೊಂಡು, ಅವರ ಸೊಸೆಯನ್ನು ಮಾತನಾಡಿಸಿ, ಅವರ ಅತ್ತೆ ಆರೋಗ್ಯ ವಿಚಾರಿಸಿ, ಅವರ ಕಾಫಿ ಕಷಾಯವನ್ನು ಹೊಗಳಿ, ಹಿಂತಿರುಗುವುದೆಂದು ನಿಶ್ಚಯಿಸಿದೆವು. ಈಗಿನ ಹುರುಳಿ ಬೆಲೆ, ಹುಲ್ಲಿನ ಅಭಾವ, ರಬ್ಬರ್ ಟೈರುಗಳ ಕಂಟ್ರೋಲು,—ಇವುಗಳಿಂದ ಎಲ್ಲ ಊರುಗಳಂತೆ ನಮ್ಮೂರಲ್ಲೂ ಗಾಡಿ ಬಾಡಿಗೆ ವಿಪರೀತವೇ. ನಾಲ್ಕು ಜನರೂ ಒಂದೇ ರಥದಲ್ಲಿ ಕುಳಿತು ತೆರಳುವುದೇ ನಮ್ಮ ನಮ್ಮ ಸ್ನೇಹಕ್ಕೂ ಭೂಷಣ ಎಂದು ನಿರ್ಧರಿಸಿದೆವು. ನಾಲ್ಕು ಗಂಟೆಗೆ ಪಂಕಜಮ್ಮ ಗಾಡಿಗೆ ಹೇಳಿ ಕಳುಹಿಸಿ ಬಾಡಿಗೆ ಗೊತ್ತುಮಾಡಿ, ಅದರಲ್ಲಿ ಕುಳಿತು ವೇದವಲ್ಲಿ ಮನೆಗೆ ಬರುವುದು, ಆಕೆ 4-10ಕ್ಕೆ ಸಿದ್ಧವಾಗಿ ಬಾಗಿಲಲ್ಲೇ ಕಾದಿದ್ದು ಕಟಕಟಶಬ್ದ ಕೇಳಿದಕೂಡಲೇ ಗೇಟಿಗೆ ಬರುವುದು, ಅವರನ್ನು ಹತ್ತಿಸಿಕೊಂಡು ನೆಟ್ಟಗೆ 4-15ಕ್ಕೆ ನೀಲಮ್ಮನ ಮನೆಗೆ ಬಂದು ಮುಂಭಾರ ಹಿಂಬಾರ ಹೆಚ್ಚಾಗದಂತೆ ಗಾಡಿಯಲ್ಲಿ ಸುವ್ಯವಸ್ಥಿತವಾಗಿ ಅವರನ್ನೂ ಕೂರಿಸುವುದು, ಅನಂತರ 4-25ರ ಹೊತ್ತಿಗೆ ನಮ್ಮ ಮನೆ ಮುಂದಿನ ದಿಬ್ಬ ಹತ್ತಿಸಿ, ಕುದುರೆಯನ್ನೂ ಅದರ ಹಿಂದೆ ಗಾಡಿಯನ್ನೂ ತರುವುದು, ನಾನೂ ಒಳಗೆ ಕೂತು ಕಾಲು ನೀಡಿದಮೇಲೆ, ಇಳಿಜಾರಿಲ್ಲದ "ದಿವಾನ್ ರಸ್ತೆ" ಮೂಲಕವಾಗಿ ಕಾವೇರಮ್ಮನವರ ಬಂಗ್ಲಿಯನ್ನು 5 ಗಂಟೆಗೆ ಸರಿಯಾಗಿ ಸೇರುವುದು, ಎಂಬ ಟೈಂಟೇಬಿಲ್ಲನ್ನು ನಾವು ಡಿಸ್ಕಸಿದೆವು, ನಾಲ್ಕೈದು ಸಲ ಒಬ್ಬರಿಗೊಬ್ಬರು ಹೇಳಿಕೊಂಡು ಉರು ಹೊಡೆದೆವು. ಪಂಕಜಮ್ಮನಿಗೆ ಎಚ್ಚರಿಕೆಕೊಟ್ಟು, ಆಕೆಯ ಜವಾಬ್ದಾರಿಯನ್ನು ಆಕೆಗೆ ಮನವರಿಕೆ ಮಾಡಿಸಿ, ಆಕೆಯ ಬೆನ್ನುತಟ್ಟಿ, ಆಕೆಯನ್ನು ಬೀಳ್ಕೊಟ್ಟೆವು. ವೇದವಲ್ಲಿಯೂ ನೀಲಮ್ಮನೂ ತಮ್ಮ ತಮ್ಮ ಪಾಲಿನ ಪ್ರಮಾಣಸಿದ್ಧತೆಗಳನ್ನು ವಿಳಂಬಮಾಡದೆ ನೆರವೇರಿಸುವುದಾಗಿ ಮಾತುಕೊಟ್ಟು, ಮನೆಗೆ ಹೋದರು. ನಾನೂ ಮರುದಿನದ ಮಹಾಯಾತ್ರೆಯ ಮನೋಹರತೆಯನ್ನೇ ಮೆಲುಕು ಹಾಕುತ್ತಾ, ಮನೆಯೊಳಕ್ಕೆ ಹೋಗಿ ಬಾಗಿಲು ಹಾಕಿದೆ

ಸಂಜೆ ಸ್ಕೂಲಿಂದ ಬರುವ ಮಕ್ಕಳಿಗೆಲ್ಲ ಮಧ್ಯಾಹ್ನವೇ ತಿಂಡಿ ಮಾಡಿಟ್ಟೆ. ಪಕ್ಕದ ಮನೆ ತೆರ್ಮಾಸ್‌ಫ್ಲಾಸ್ಕ್ ತಂದು, ನಮ್ಮ ಮನೆಯದರಲ್ಲೂ ಅದರಲ್ಲೂ ಕಾಫಿ ತುಂಬಿ ಅವರ ಟೇಬಿಲ್ ಮೇಲಿರಿಸಿದೆ. ರಾತ್ರಿಗೆ ಒಂದಿಷ್ಟು ಬಿಸಿ ಬಿಸಿ

ಸಾರು ಕೊಡಿ ಎಂದು ಅಲಮೇಲಮ್ಮನವರನ್ನು ಕೇಳಿ ಹೂಂ ಅನ್ನಿಸಿದೆ. ಆತುರ ಆತುರವಾಗಿ ಅಲಂಕಾರ ಪೂರೈಸಿ ಗಡಿಯಾರ ನೋಡಿದೆ. ಆಗಲೇ 4-30!.... ಅಲ್ಲ,.... ಛೆ! 3-30!.... ಸರಿ, ಪುಸ್ತಕ ಓದುತ್ತಾ ಕೂತೆ. ಥೂ! ಕಾದು ಕೂತರೆ, 60 ನಿಮಿಷ ಅನ್ನೋದು ಒಂದು ಯುಗ ಇದ್ದ ಹಾಗಾಗುತ್ತೆ....ಹತ್ತು ತ್ರುಟಿ ಮುಗಿಸಿದರೂ, ಹಾಳು ಗಡಿಯಾರದಲ್ಲಿ ಇನ್ನೂ 3-50. ಇನ್ನಿದು 4 ಆಗಿ, 4-10 ಆಗಿ, 4-20 ಆಗಿ ... ಅಯ್ಯೋ! ಅಯ್ಯೋ! ಅನ್ನಿಸಿತು. ಅನ್ನಿಸಿದರೆ, ಮಾಡುವುದೇನು? ಮುಳ್ಳನ್ನು ತಳ್ಳಿದರೆ 3 ಜನರೂ ಬರುತ್ತಾರೆಯೇ? 4-25 ಅಂದರೆ, ಪಂಕಜಮ್ಮ 4-25ಕ್ಕೇ ಸರಿಯಾಗಿ ಬರುತ್ತಾರೆಯೋ... 4 15ಕ್ಕೇ ಏಕೆ ಬರಬಾರದು? ಮೊನ್ನೆ 7 ಗಂಟೆಗೆ ಬನ್ನಿ, ಆರತಿ ಅಕ್ಷತೆಗೆ ಅಂದರೆ, ಇದೇ ಪಂಕಜಮ್ಮ ಊರಿಗೆ ಮುಂಚೆ 6ಕ್ಕೇ ಬಂದು ಕುಕ್ಕರಿಸಲಿಲ್ಲವೇ! ಪಂಕಜಮ್ಮನದು ಯಾವಾಗಲೂ ಕೊಂಚ ದುಡುಕು. ಅವರ ಗಡಿಯಾರದ್ದು ನಾಗಾಲೋಟ.

“4-10, 4-15, 4-20, 4-25 ...... ಜಟಕದ ಸದ್ದು? 4-35, ಎಲ್ಲಿ? 4-45 ....ಚೆನ್ನಾಯಿತು. 4-50....ಇನ್ನೊಬ್ಬರನ್ನ ನಂಬಿದರೆ ಇದೇ ಗತಿ. ನಾಲ್ಕಾಣೆ ಉಳಿಸುವುದಕ್ಕೆ ಹೋಗಿ, ಹೀಗೆ ತಡಮಾಡಿಕೊಂಡು, ಒಂದೇ ವಾಹನದಲ್ಲಿ ಮುದುರಿಕೊಂಡು ... ಒದ್ದಾಡಿ.. ನಾನೇ ಮೊದಲು ಹೊರಡಬೇಕಾಗಿತ್ತು.. ಓ! ಗಾಡಿ ಬಂತು, ಯಾವುದೋ ... ಇದೋ? ಥೂ! ಇದು ಸ್ಕೂಲ್ ಹುಡುಗಿಯರು ಹಿಂದಕ್ಕೆ ಬರುತ್ತಿರುವ ಗಾಡಿ. ಇನ್ನು ಲಲಿತೂನೂ ಬಂದುಬಿಡುತ್ತಾಳೆ....ಸುಬ್ಬು ಗುಂಡ ಬಂದರಂತೂ ಗಾಡಿಯಲ್ಲಿ ತಾವೂ ನುಗ್ಗಿಬಿಡುತ್ತವೆ. ಅವರು ಬಂದರಂತೂ, ಪ್ರೋಗ್ರಾಮಿಗೇ ಪಂಗನಾಮ”

5....5-10. ಮಕ್ಕಳು ಬಂದುವು. ತಿಂಡಿ ತೀರ್ಥಗಳಾದುವು. ಸದ್ಯ, ಆಫೀಸಿನಿಂದ ಬರುವುದು ತಡ ಅಂತ ಅವರು ಹೇಳಿ ಕಳುಹಿಸಿದರು. ಆದರೇನು? 5-15. ಇನ್ನು ಹೊರಟರೆತಾನೆ ಏನುಸುಖ? ಒಂದುಗಳಿಗೆ ಕೂತು ಆರಾಮವಾಗಿ ಹರಟೆ ಹೊಡೆಯುವಹಾಗಿಲ್ಲ. ಅಯ್ಯೋ ಅಂಥ ಹರಟೆ ತಾನೆ ಏನಿದೆ ಮಾತಾಡುವುದಕ್ಕೆ....ಬಾಡಿಗೆಗೆ ಮನೆ ಸಿಕ್ಕುವುದಿಲ್ಲ, ಹಾಲಿನವಳು ತುಂಬಾ ನೀರು ಸೇರಿಸುತ್ತಾಳೆ, ಸಕ್ಕರೆ ಸಿಗುತ್ತಿಲ್ಲ, ಅಕ್ಕಿತುಂಬಾ ಕಲ್ಲು ನೆಲ್ಲು! ಇಷ್ಟೆ! ಈ ಪುರುಷಾರ್ಥಕ್ಕೆ ಹೆಂಗಸರು ಒಂದೆಡೆ ಸೇರುವುದು ತಾನೆ ಯಾಕೆ?

5-35! ಮೂರುಜನ ಮಹರಾಯಿತಿಯರೂ ಹಲ್ಲು ಕಿರಿಯುತ್ತಾ ಬಂದರು! ನನಗೆ ರೇಗಿತು. ನೀವೇ ಹೋಗಿ, ನಾನು ಬರುವುದಿಲ್ಲ, ಎಂದೆ. ಕಡೆಗೆ, ನನ್ನ ಸಹಿತ ಗಾಡಿ ಕದಲುವ ಹೊತ್ತಿಗೆ ಸರಿಯಾಗಿ 6-15! ಆ ಕುದುರೆಯೋ ತಂಟಲ್ಮಾರಿ. ಚೌಕ ಚೌಕದಲ್ಲೂ ಹಿಂಗಾಲುಮೇಲೆ ನಿಂತು ಸರ್ಕಸ್‌ಮಾಡುವುದು, ಮುಂಗಾಲುಮೇಲೆ ನಿಂತು ಹಿಂದಕ್ಕೆ ಒದೆಯುವುದು! ಒಳಗೆ ಕೂತಿದ್ದ ವೇದವಲ್ಲಿ ದಾರಿಯುದ್ದಕ್ಕೂ ಗಾಡಿ ಅಪಾಹುತದ ಕತೆಗಳನ್ನೇ ಹೇಳುತ್ತಿದ್ದಳು. ಪಂಕಜಮ್ಮ

ಚೀರಿ—"ಇಷ್ಟಕ್ಕೂ ಅವರು ಮನೆಯಲ್ಲಿಲ್ಲದಿದ್ದರೆ ಗತಿ ಏನು ?" ಅಂತ ಅಪಶಕುನ ನುಡಿದಳು. ನೀಲಮ್ಮನದು ಗಂಡನದೇ ಚಿಂತೆ "ಅವರ ಹತ್ರ ಒಂದು ಮಾತು ತಿಳಿಸಿ ಬರಬೇಕಾಗಿತ್ತು. ಅದಕ್ಕೆ ಒಂದು ಚೀಟೀನಾದರೂ ಬರೆದು ಬಾಗಿಲಿಗೆ ಅಂಟಿಸಬೇಕಾಗಿತ್ತು"—ಅಂತ.

ಸರಿ ! ಪ್ರಾಣ ಸಹಿತ ಕಾವೇರಮ್ಮನ ಬಂಗ್ಲೆ ಮುಂದೆ, ಒಬ್ಬೊಬ್ಬರಾಗಿ ಇಳಿದೆವು. ಮೂರು ಜನರ ಹತ್ತಿರದಿಂದಲೂ ಎಂಟೆಂಟಾಣೆ ವಸೂಲಿ ಮಾಡಿ ನನ್ನದೂ ಕೂಡಿಸಿ, ಬಾಡಿಗೆ ಕೊಡುವುದಕ್ಕೆ ಕೈನೀಡಿದೆ....ನೀಲಮ್ಮ 'ಅಯ್ಯೋ !' ಅಂತ ಚೀರಿದಳು !

ತಿರುಗಿ ನೋಡಿದೆ. ಹೌದು. ಕಾವೇರಮ್ಮ ಮನೆಯಲ್ಲಿಲ್ಲ. ಬಾಗಿಲಿಗೆ ಬೀಗ ಹಾಕಿತ್ತು. ಗೇಟ್ ಹತ್ತಿರ ಆಕಳಿಸುತ್ತಿದ್ದ ಜವಾನ ಹೇಳಿದ, "ಸೊಸೇನ್ನೂ ಕರ್ಕೊಂಡು ಗಾಡೀಲಿ ಇತ್ಲಾಗೇನೇ ಇನ್‌ಸ್ಪೆಕ್ಟರ್ ಸಾಹೇಬರ ಮನೆಗೆ ಅಂತ ಹೊರಟರು, ತಾಯಿ ! ರಾತ್ರಿ ರೈಲಿಗೆ ಅಮ್ಮಾವರು ಹೊರಟು ಬಿಡಬೇಕಂತೆ ... ಸಾಮಾನೆಲ್ಲ ಕಟ್ಟಾಯ್ತು. ನಾಲ್ಕೋ ಎಂಟೋ ತೆಂಗಿನಕಾಯಿ ತರುತ್ತೇನೆ. ಅದನ್ನೂ ಇಟ್ಟುಬಿಟ್ಟು ಕಡೇಲಿ ಪಾತ್ರೆಚೀಲ ಕಟ್ಬೋಣ, ಬೋರ, ಅಂದ್ರು, ಅಮ್ಮಾವರು ಕಾಯಿ ತರೋಕೆ ಹೋಗವರೆ" ಅಂದ.

ಆಯಿತಲ್ಲ ! ಇನ್‌ಸ್ಪೆಕ್ಟರ್ ಸಾಹೇಬರೆಂದರೆ,—ಪಂಕಜಮ್ಮನ ಮನೆ ! ಛಿ ! ಅವರು ಬಂದಾಗ, ನಾನಲ್ಲಿರಬೇಡವೇ ? ಅಂದಳು, ಅವಳು. ಯಥಾಪ್ರಕಾರ ಗಾಡಿ ಭರ್ತಿಮಾಡಿಕೊಂಡು, ಆ ಹಾಳು ಕುದುರೇನ ಗ್ಯಾಲಪಿಸಿದೆವು. ಪಂಕಜಮ್ಮನ ಮನೆ ಬಿಮ್ ಅಂತ ಇತ್ತು. ಅವರ ಪಕ್ಕದ ಮನೆಯವರು 'ಎಲ್ಲೋ ಹೋದರು' ಅಂದರಂತೆ. 'ನಾವು ವೇದವಲ್ಲಿ ಮನೆಗೆ ಹೋಗುತ್ತೇವೆ ಅಂತ ಹೇಳಿ, ಪಂಕಜಮ್ಮನವರು ಬಂದರೆ' ಎನ್ನುತ್ತಾ ಅತ್ತೆ ಸೊಸೆ ಆಗಲೇ ಹೊರಟು ಬಿಟ್ಟರಂತೆ. ಸರಿ ! ನಮ್ಮ ರಥ ಅಲ್ಲಿಗೆ ಸಾಗಿತು. ಅಲ್ಲೂ ಅವರು ಸಿಗಲಿಲ್ಲ. ನೀಲಮ್ಮನ ಮನೆಗೆ ಹೋದೆವು ಅಲ್ಲೂ ಬಡಿದ ಬಾಗಿಲು ಕಂಡು, ನನ್ನ ಮನೆಗೇ ನುಗ್ಗಿದಾರೋ ಏನೋ ಅಂತ ನಮ್ಮ ಮನೆಗೂ ಓಡಿಸಿದೆ. ಎರಡು ಫ್ಲಾಸ್ಕುಗಳನ್ನೂ ಸುಖವಾಗಿ ಖಾಲಿ ಮಾಡಿ ಅವರು ಅಲ್ಲೇ ವರಾಂಡಾದಲ್ಲೇ ಕಾಲುನೀಡಿಕೊಂಡು ವೇಪರೋದುತ್ತಿದ್ದರು. ಕಾವೇರಮ್ಮನವರು ಬಂದಿದ್ದರೇ ಅಂತ ಅವರನ್ನ ಕೇಳಿದರೆ, ಅಷ್ಟು ಹೆಂಗಸರ ಮುಂದೇನೂ ಯಾರು, ಯಾವ, ಎಲ್ಲಿ, ಏಕೆ, ಲೊಟ್ಟು ಲೊಸ್ಕು, ಅಂತ ಕಾಡಿಸಿ ನಕ್ಕರು. ಕಡೆಗೆ, ಆ ಬಾಯಿಂದ ಮಾತು ಹೊರಟಿತು. ಬಂದಿದ್ದರಂತೆ. ರೈಲಿಗೆ ಹೊರಡುತ್ತೇನೆ, ಅಂತ ಹೇಳಿ, ಅಂದರಂತೆ. ಊರಿಗೆ ಹೋಗಿ ಕಾಗದ ಬರೆಯುತ್ತೇನೆ, ಅಂದರಂತೆ.

ಗಂಟೆ 7-45 ಸ್ಟೇಷನ್ನಿಗೇ ಹೋಗೋಣ, ಅಂತ ನೀಲಮ್ಮನ ಹಠ. ವೇದವಲ್ಲಿ ಗೊಣಗಿದರೆ ಯಾರು ಕೇಳುತ್ತಾರೆ ? "ಬೇಗ ಹೊರಡಿ !" ಅಂತ

ನಮ್ಮವರೂ ನೂಕಿದರು, ಗಾಡಿ ತುಂಬಿತು : 'ಬೇಗ! ಬೇಗ!' ಎಂದು ನಾವು ಕೂಗಿದೆವು. ಆ ಹಾಳು ಜಟಕಾದವನ ಮನೆ ಅದೇ ದಾರಿಯಲ್ಲಂತೆ. ಕುದುರೆ ಅಲ್ಲಿಗೇ ನೆಟ್ಟಗೆ ನುಗ್ಗುತ್ತೆ ಅಂತ, ಅವನು ಬಳಸಿದ.

8ಕ್ಕೆ ರೈಲು ಹೊರಡುವುದು. ಹೊರಡುವುದೇನು? ಹೊರಟೇ ಬಿಟ್ಟಿತು.

ನಾವು ಚಪ್ಪಲಿಗಳು ಹಾಕಿಕೊಂಡು ಪಟಪಟ ಅಂತ ಫ್ಲಾಟ್‌ಫಾರಂಗೆ ಬಂದೆವು....ಹಸುರು ಬಾವುಟ, ಶಿಳ್ಳೆ!....ರೈಲು ಹೊರಟೇ ಬಿಟ್ಟಿತು. ಕಿಟಿಕಿಯೊಂದರಿಂದ ಬೂದು ಬಣ್ಣದ ಸೆರಗೊಂದು ಗಾಳಿಯಲ್ಲಿ ಹಾರಾಡಿತು. ಅದೇ ಕಾವೇರಮ್ಮ! ಅಂತ ನಾನು, ಅಲ್ಲ ಅಂತ ಪಂಕಜ!............

—ಶ್ರೀ ಕೇಸರಿ.

ವಿಮರ್ಶೆ

ಡಿ. ಕೆ. ಬಿ. ಅವರ ಇಂಗ್ಲೀಷ್—ಇಂಗ್ಲೀಷ್—ಕನ್ನಡ ಸ್ಟ್ಯಾಂಡರ್ಡ್ ಡಿಕ್ಷನರಿ

ಸಕಲವೂ ಪ್ರಿಯವಾದ ಸಮರಕಾಲದಲ್ಲಿ, ಕೇವಲ ಐದೇ ರೂಪಾಯಿಗೆ, ಸುಮಾರು ಇಪ್ಪತ್ತನಾಲ್ಕು ಸಹಸ್ರಶಬ್ದ, ಅರ್ಥಗಳನ್ನು ಇಂಗ್ಲೀಷಿನಲ್ಲಿ, ಕನ್ನಡದಲ್ಲಿ ಒದಗಿಸುವುದು, ಸಾಹಸದ ಕೆಲಸವೇ ಸರಿ, ಇದಕ್ಕಾಗಿ ದುಡಿದ ಡಿ. ಕೆ. ಭಾರದ್ವಾಜರೂ, ಪ್ರಕಾಶಕರೂ ಕನ್ನಡನಾಡನ್ನೇ ಋಣಿಯನ್ನಾಗಿ ಮಾಡಿಕೊಂಡಿದ್ದಾರೆ.

ವಿದ್ಯಾರ್ಥಿಗಳಿಗೆ ಮಾತ್ರ ಅಲ್ಲದೆ, ಎಲ್ಲ ತರಹ ಬರಹಗಾರರಿಗೂ, ಅದರಲ್ಲೂ, ಆಂಗ್ಲೇಯ ಸಾಹಿತ್ಯದ ಸವಿಗಂಡ ಕನ್ನಡ ಬರಹಗಾರರಿಗೆ, ಈ ನಿಘಂಟಿನಿಂದ ಬಹಳ ಪ್ರಯೋಜನ ಎಂದು ಹೇಳಬೇಕಿಲ್ಲ. ಆಂಗ್ಲೇಯ ಭಾಷೆಯಲ್ಲಿ ಯೋಚಿಸಿ, ಕನ್ನಡಕ್ಕೆ ತರ್ಜುಮೆಮಾಡಿ ಕನ್ನಡ ಬರಹಗಾರರು, ಕನ್ನಡ ಭಾಷಣಕಾರರು ಎಂದೆನಿಸಿಕೊಳ್ಳುವವರಿಗಂತೂ ಈ ಪುಸ್ತಕವು 'ಗೀತಾ' ಆಗಲೇಬೇಕು.

ಶಾಲೆಗಳವರೂ, ಸಂಸ್ಥೆಗಳವರೂ, ಈ ಪ್ರಕಟನೆಗೆ ಉದಾರ ಸಹಾಯನೀಡಿ, ಪ್ರಕಾಶಕರೂ, ಗ್ರಂಥಕರ್ತರೂ ಮನ ಧನ ನೋಯದಂತೆ ಮಾಡುವುದು ಕನ್ನಡಿಗರ ಕರ್ತವ್ಯ.

ಅಲ್ಲಲ್ಲಿ ಕಾಣಬರುವ ಇಂಗ್ಲೀಷ್ ಹಾಗೂ ಕನ್ನಡ ಮುದ್ರಾರಾಕ್ಷಸರು ಮುಂದಿನ ಆವೃತ್ತಿಯಲ್ಲಿ ಖಂಡಿತ ಸರಿ ಹೋಗುವುದರಿಂದ ಅದನ್ನೇನೂ ಹೇಳಬೇಕಿಲ್ಲ.

✦

ಒಳ್ನುಡಿ, ವಾಕ್ಸಂಪ್ರದಾಯ, ಭಾಷಾರೀತಿ— ಇವುಗಳನ್ನು ಪ್ರಮುಖ ಪ್ರಯೋಗಗಳಿಗೆಲ್ಲಾ ಕೊಟ್ಟಿರುವುದು, ಈ ಪುಸ್ತಕದ ಒಂದು ಹಿರಿಯ ಗುಣ.

✦ ✦ ✦

ಜೋಡಿದಾರನ ವಧು

(ಗದ್ಯರೂಪಕ ಪದ್ಯ)

ಬಂದ ವಧುಗಳನೆಲ್ಲ ತೆಗಳಿ ಕಳುಹಿದ ರಾಮಚಂದ್ರ
ನೋಡ ಬಂದವರೆಲ್ಲ ಅಳುತ ಬಿಡುವರು ಕಾಮಸಂದ್ರ ॥

ಬಂದ ಹೆಣ್ಣನ್ನೆಲ್ಲ ಕಿವಿ ಕಿವುಡು,
ಮೂಗುದ್ದ, ಬಾರದೊಂದೂ ಹಾಡು,
ಬಣ್ಣದಲಿ ಕಾಗೆಯನು ಮೀರಿಹುದು,
ತಲೆಯ ಕೂದಲೋ ಅದು ಒಂದು ಕಾಡು,
ಎಂದೆನುತ ವಿಧವಿಧದಿ ಹಳಿಯುತ್ತಲಿರೆ ರಾಮಚಂದ್ರ
ಆಯಿತದು ಬಂದದಾರಿಗೆ ಸುಂಕವಿಲ್ಲದ ಕಾಮಸಂದ್ರ ॥

ಒಂದಲ್ಲ, ಎರಡಲ್ಲ, ಮೂರಲ್ಲ, ಆರಲ್ಲ
ನೂರಾರು ಹೆಣ್ಣುಗಳು ಸುಳಿಸುಳಿಯುತಿರುವಲ್ಲಿ
ರಾಮಚಂದ್ರನು ಒಂದನೂ ಪಡೆಯಲೊಲ್ಲ;
ಇಂತು ಕಳೆಯಿತು ದಿವಸಗಳು, ಮಾಸಗಳು, ವತ್ಸರಗಳು
ಸಿದ್ಧಿಸದೆ ಹೋಗಿಹವು ರಾಮಚಂದ್ರನ ಆಶಯಗಳು ॥

ರಾಮಚಂದ್ರನ ನೋಡಿ ಹೋದ ಹೆಣ್ಣುಗಳೆಲ್ಲ
ಇಂದು ತಾಯೆನಿಸಿ ಮೆರೆಯುತಿರುವರು ಲೋಕದಲ್ಲಿ !
ಪಾಪ ! ರಾಮಚಂದ್ರನಿಗಿನ್ನು ಮದುವೆಯೇ ಇಲ್ಲ
ಕಂಗಳಿಲ್ಲದ ದೇವ (!?) ತಕ್ಕ ಹೆಣ್ಣನೀಯಲೊಲ್ಲ !
ಊರ ಜೋಡೀದಾರಗೊಂದು ಹೆಣ್ಣು ಸಿಗುವುದು ಕಷ್ಟವೇ ?
(ಎಂ. ಎ) ಎಮ್ಮೆಯಲ್ಲದಿದ್ದರೆ ಏನು ಕೋಣನಂತೂ ದಿಟವು! ॥

ಮರಕೋತಿಯಾಟದಲಿ ಮೀರಿಸಲು ಯಾರಿಹರು ?
ಬುದ್ಧಿಯಲಿ ಬೃಹಸ್ಪತಿಗು ಮಿಗಿಲಾದ ಮಿಂಚು

ವಿದ್ಯೆಯಲ್ಲಿ ಸರಸತಿಯನ್ನೇ ಅಣಕಿಸುವ ಸಂಚು
ಇನ್ನಿವಗೆ ನಮ್ಮೂರಿನಲಿ ಸಮನಾರು, ಸರಿಯಾರು ?
ಇಂಥವಗೆ ಹೆಣ್ಣು ಸಿಗುವುದು ಕಷ್ಟವೇ ನಮ್ಮ ನಾಡಿನಲಿ
ಹೆಂಗಸರ ಸೆನ್ಸಸ್ಸೆ ಹೆಚ್ಚಿರುವ ಈ ದೇಶದಲ್ಲಿ ?

* * *

ಕಡೆಗೊಂದು ವಧು ಇವನ ಕೈಪಿಡಿಯೆ
ಪುಣ್ಯಶಾಲಿಯೆ ರಾಮಚಂದ್ರ.
ಧನ್ಯನಾಯಿತು ರಾಮಚಂದ್ರ
ಊರಿನಲಿ ಜನವೆಲ್ಲ ನಲಿನಲಿಯಿತು.

ಇವನ ಆಶಯವೆಲ್ಲ ಪೂರ್ತಿಗೊಂಡಿಹುದು
ಮನಸಾರೆ ಇಚ್ಛಿಸಿದ ವಧುವು ಸಿಕ್ಕಿಹುದು :
ಕಲ್ಲಿದ್ದಲನು ಮೀರಿಸುವ ಮೈಬಣ್ಣ
ಕತ್ತೆಯೊಲು ಇಂಪಾದ ರಾಗ—ತಾನ
ಆದರೂ ಮಿಗಿಲೆನಿಸಿ ರಂಜಿಸಳು ರಾಮಚಂದ್ರನ ಕಣ್ಣಿಗೆ
ಪ್ರೇಮವೇ ಮೂರ್ತಿವೆತ್ತಿಹುದು ಜೋಡಿದಾರನ ಕಣ್ಣಿಗೆ ! ||

—ಸಿ. ಕೆ. ಅ.

ವರಮಾನ ತೆರಿಗೆಯಧಿಕಾರಿಗಳು ಹಾಲಿ ದೀರ್ಘಜೀವಿಗಳಂತೆ—

—ಇದು ವ್ಯಾಪಾರಸ್ಥರಮೇಲೆ ಆರೋಪಣೆಯಲ್ಲ. ಅಧಿಕಾರಿಗಳು ತೆಗೆದುಕೊಳ್ಳುವ ಮುಂಜಾಗ್ರತೆ ಕ್ರಮದ ವೈಶಿಷ್ಟ್ಯ.

* * *

ಹಳೇ ಗ್ರಾಮಾಫೋನುಗಳನ್ನು ಬೇಗ ರಿಪೇರಿಮಾಡುತ್ತೇವೆ ಎಂದು ಒಬ್ಬ ಸಾಹಸಿಕನು ಜಾಹೀರಾತನ್ನು ಹಾಕಿದ್ದಾನೆ.

—ಅವನಿನ್ನೂ ಬದುಕಿದ್ದಾನೆ.

* * *

ಜನಪಾದ ಸಾಹಿತ್ಯ

ಸಾಹಿತ್ಯವು ನಾನಾಮುಖಗಳಿಂದ ಜನಸೇವೆಮಾಡುತ್ತಲಿತ್ತು. ಈ ರೀತಿ ಜನಸೇವೆ ಮಾಡುತ್ತಲಿದ್ದ ಸಾಹಿತ್ಯವು ಜನಗಳ ಪಾದಸೇವೆಯನ್ನು ಒಂದುದಿನ ಪ್ರಾರಂಭಿಸಿತೆಂದು ಕಾಣಿಸುತ್ತದೆ. ಅದನ್ನು ಅಂತೂ ನಾವು ಜನಪಾದ ಸಾಹಿತ್ಯವೆಂದೇ ಕರೆಯೋಣ. ಜನಗಳ ಪಾದದಡಿಗೆ ಸಿಕ್ಕಿದ ಸಾಹಿತ್ಯವು ಜನಪಾದ ಸಾಹಿತ್ಯ.

ಮಣೆಮೇಲೆ ನಿಂತ್ಕೊಂಡು ಎಲ್ಲೆಲ್ಲೋ ನೋಡ್ತೀಯಾ!
ಮನೆಯವಳ ನೋಡೋ ಬಲದಲ್ಲಿ!
ಮನೆಯವಳನೋಡೋ ಬಲದಲ್ಲಿ ಎಲೆಹೈದ
ಹಲಸಿನಹಣ್ಣು ಕೊತ್ತಿದಂಗೆ!

ಮದುವೆಯಲ್ಲಿ ವರನು ಎದುರಿಗಿರುವ ವಧುವಿನಮೇಲೆ ತನ್ನ ದೃಷ್ಟಿಯಿಡದೆ ಎಲ್ಲೆಲ್ಲೋ ನೋಡುತ್ತಿರುವನು. ವಧು ಸುಂದರಿ, ಚೆಲುವಾದ ಮುಖ, ಹಲಸಿನ ಹಣ್ಣು ಕೊತ್ತಿದ ಹಾಗೆ ಇರುವಳು. ಮುಂದೆ ವರನಮನೆಯ ಯಜಮಾನಿ. ಸಾಯುವತನಕ ಇವಳ ಮುಖ ನೋಡುವುದು ತಪ್ಪದು, ಈಗೇನು ಆತುರ? ಎಂದು ವರನು ಆ ಸಮಯದ ಸದುಪಯೋಗಪಡಿಸಿಕೊಳ್ಳುತ್ತಿರುವನು.

ದೇವರು ದೊಡ್ಡವನು. ಮದುವೆಯು ಮುಗಿಯುವುದು. ಹೆಣ್ಣನ್ನು ಅತ್ತೆಮನೆಗೆ ಕಳುಹಿಸಬೇಕು. ಹೆತ್ತತಾಯಿ, ಹೆಣ್ಣು ಹೆಂಗಸು ವ್ಯಥೆಪಡುತ್ತಾಳೆ. ಪುತ್ರೀರತ್ನ ಗಂಡನಮನೆಗೆ ಹೋಗುವವಳು, 'ಹಲಸೀನಹಣ್ಣು ಕೊತ್ತಿದಂಗೆ' ಮುಖವಿರುವವಳು ತಾಯಿಯನ್ನು ಗದರಿಸುತ್ತಾಳೆ.

ಹೆಣ್ಣು ಹಡೆಯಲಿಬೇಡ ಹೆರವರಿಗೆ ಕೊಡಬ್ಯಾಡ
ಹೆಣ್ಣುಹೋದಾಗ ಅಳಬೇಡ! ತಮ್ಮಪ್ಪ!
ಸಿಟ್ಟಾಗಿ ನನಗೆ ಬೈಬ್ಯಾಡ.
ಅಪ್ಪನು ಬೇಡ ಬೇಡ ಎಂದು ಹೇಳಿದರೂ ನೀನ್ಯಾಕೆ ಹೆಣ್ಣುಹೆತ್ತೆ?

ಒಂದು ಸಮಯ ಹೆತ್ತರೂ ಹೆರವರಿಗೆ ಮದುವೆಯಾಕೆ ಮಾಡಿಕೊಟ್ಟೆ? ಈಗ ಗಂಡನಮನೆಗೆ ಹೋಗುವಾಗ ಈರೀತಿ ಕುಟ್ಟಿಕೊಂಡು ಯಾತಕ್ಕೆ ಗೋಳಾಡುತ್ತೀಯೆ? ಇದೆಲ್ಲಾ ನಿನ್ನ ತಪ್ಪೇ ಹೊರತು ನನ್ನ ತಪ್ಪಲ್ಲ. ಸುಮ್ಮನೆ ನನ್ನನ್ನು ಬೈಯ್ಯಬೇಡ ಎಂದು ತನುಜೆಯು ಮಾತೆಯನ್ನ ಸಂತೈಸುತ್ತಾಳೆ. ಈ ಮಾತುಗಳಿಂದ ಮಾತೆಗೆ ಸಮಾಧಾನವಾಗಿ ಮಗಳನ್ನು ಸಂತೋಷವಾಗಿ ಮತ್ತು ಆತುರ

ವಾಗಿ ಆಶ್ರಮನೆಗೆ ಕಳುಹಿಸುತ್ತಾಳೆ. ಈ ಕೆಲಸವನ್ನ ಇನ್ನೂ ಮೊದಲೇ ಮಾಡಬೇಕಿತ್ತು ಎಂದುಕೊಳ್ಳುತ್ತಾಳೆ.

ಗಂಡ ಹೆಂಡಿರು ಪ್ರೇಮದಿಂದ ಸಂಸಾರ ಹೂಡಿದ್ದಾರೆ. ಕೆಸರುದಾರಿ, ಸಂಸಾರ ಚಕ್ರವು ಸರಿಯಾಗಿ ಉರುಳುತ್ತಿಲ್ಲ. ಪ್ರೇಮದ ಪರಾಕಾಷ್ಠೆಯೆನ್ನಬಹುದು. ಗಂಡನು ಜಾಗ್ರತೆಯಾಗಿ ಎದ್ದು ಸ್ನಾನಮಾಡಿ ವಿಭೂತಿ ಹಚ್ಚಿಕೊಳ್ಳುತ್ತಿರುವನು, ಪತ್ನಿರತ್ನವು ಆದಿರುವ ಜಾಗವನ್ನ ಸೂಚಿಸುತ್ತಾಳೆ.

ಮುಕ್ಕ ನಿನಗ್ಯಾಕೆ ಮೂರುಕಾಸಿನಭೂಷಿ !
ತಿಪ್ಪೆಮ್ಯಾಲಿರುವ ಒಣ ಬೂದಿ ! ತಕ್ಕೊಂಡು !
ಮುಕ್ಕ ನಿನ ಹಣೆಗೆ ಬಡಕೋಳಾ !

ಪತಿಗೆ ಸಂತೋಷವಾಗುವುದು. ಈರೀತಿ ಸಹಾಯಮಾಡುವ ಪತ್ನಿಮಣಿಯು ತನಗಿರುವಾಗ ನನಗೇನು ಕಮ್ಮಿ ಎಂದುಕೊಳ್ಳುವನು. ಸಮಾಧಾನವಾಗಿ ಬೂದಿ ತಿಕ್ಕಿಕೊಂಡು ಸ್ಮಶಾನ ರುದ್ರನಂತೆ ಮನೆಯಿಂದ ಹೊರಗೆ ಹೊರಡುತ್ತಾನೆ. ಬಿಸಿಲೇರುತ್ತದೆ. ಹೋಗಹೋಗುತ್ತಾ ಸುಸ್ತಾಗಿ ಒಂದು ಮರದ ಕೆಳಗೆ ಮಲಗುತ್ತಾನೆ. ಅದು ಬೇವಿನಮರ.

ಬ್ಯಾಸಿಗಿ ದಿವಸಕ ಬೇವಿನಮರ ತಂಪ ! ಭೀಮರತಿಯೆಂಬ
ಹೊಳಿತಂಪ ! ಸಾಕಪ್ಪ ! ನೀತಂಪ ನನ್ನಪ್ರಾಣಕ್ಕೆ !!

ಪಾಪ, ಸಂಸಾರಿ, 'ಹಲಸಿನ ಹಣ್ಣು ಕೊತ್ತಿದಂಗೆ' ಇರುವವಳನ್ನು ಮದುವೆಯಾಗಿರುವ ಗಂಡು, ಮನೆಗಿಂತ ಬೇವಿನ ಮರದಡಿಯಲ್ಲೇ ತಂಪಾಗಿ ಮಲಗಿದ್ದಾನೆ. ಭೀಮರತಿಹೊಳೆನೀರು ತಂಪಾಗಿ ಸೇವಿಸಿದ್ದಾನೆ. ಆತನ ಪ್ರಾಣಕ್ಕೆ ಅಂದೇನೋ ಮನೆಯಿಂದ ಹೊರಬಿದ್ದಿದ್ದು ಬಹಳ ಹಿತವಾಗಿದೆ.

ಇತ್ತ ಪತಿಪ್ರಾಣ ಧಾರಳು, ಪತಿಸೇವೆಗೋಸ್ಕರ ಸಿದ್ಧಮಾಡಿದ್ದಾಳೆ
ಹಾಗಲಕಾಯ್ ಸುಲಿದು ಯಾವಡಿಗೆ ಮಾಡಲೀ ಊರಿಗೋ
ಗ್ಯಾರೆ ರಾಯರೂ ! ಬಾರದೆ ! ಯಾವಡಿಗೆ ಮಾಡಿ ಫಲವೇನ !

ರಾಯರು ಊರಿನಲ್ಲಿರುತ್ತಾರೆಂದು ಹಾಗಲಕಾಯನ್ನ ತಂದು ಕಹಿಯಾಗಿ ಗೊಜ್ಜನ್ನ ಮಾಡಬೇಕೆಂದಿದ್ದಳು ಸಾಧ್ವಿ, ಈ ಗುಟ್ಟನ್ನ ಮೊದಲೇ ಅರಿತ ಪತಿರಾಯನು ಬೆಳಗಾಗುವಾಗ್ಲೇ ಊರುಬಿಟ್ಟು ಹೋದವರು ಭೀಮಾತೀರದಲ್ಲಿ, ಬೇವಿನಮರದಡಿಯಲ್ಲಿ ತಂಪಾಗಿ ನಿದ್ರಿಸುತಿದ್ದಾರೆ. ಸುಖವಿಲ್ಲವೆಂದು ರಾಯರ ಪತ್ನಿಯು ಬೇರೆ ಲಕ್ಷಣವಾದ ಅಡಿಗೆಮಾಡಿ ಊಟಮಾಡುತ್ತಾಳೆ. ಸಾಯಂಕಾಲಕ್ಕೆ ರಾಯರು ಖಂಡಿತ ಬರುವರೆಂದು ಆ ಪತಿವ್ರತೆಗೆ ಗೊತ್ತು. ಆಗ ಚೆನ್ನಾಗಿ ಸೇವೆಮಾಡಬೇಕೆಂದು ನಿರ್ಧರಿಸಿರುತ್ತಾಳೆ.

ರಾಯ ಬರುತಾರಂತ ಪಾತ್ರಿಯಲಿ ನೀರಿಟ್ಟು ।
ರನ್ನಬಚ್ಚಲಕಮಣಿಹಾಕಿ । ಆದರೂ ।
ಆ....ಂಡೀ ಮಗರಾಯ ಬರಲಿಲ್ಲ.

ನಿಷ್ಠುರ ಪತಿವ್ರತೆ ಬಹಳ ಕೆಲಸಮಾಡಿದ್ದಾಳೆ. ಪಾತ್ರೆಯಲ್ಲಿ ನೀರಿಟ್ಟು, ಬಚ್ಚಲಲ್ಲಿ ಮಣಿಹಾಕಿ, ಕಾದಿದ್ದಾಳೆ ಸೇವೆಮಾಡಲಿಕ್ಕೆ ಸಾಧ್ವೀ ಶಿರೋಮಣಿ. ಸೇವೆ ಮಾಡಲಿಕ್ಕೆ ಆ ಮಹಾರಾಯ ಇನ್ನೂ ಬರಲಿಲ್ಲ. ಸಾಧ್ವಿಗೆ ಕೋಪಬಂದಿದೆ. ಮೃದುವಾಗಿ ಹೇಳುತ್ತಾಳೆ ಆ....ಂಡೀಮಗರಾಯ ಬರಲಿಲ್ಲ. ಇನ್ನು ಬಂದನೋ ಅವನು ತಲೆ ಎತ್ತುವ ಹಾಗಿಲ್ಲ. ಅವರ ಸಂಸಾರದ ಕೊನೆಯ ದಿನ, ಸಾಧ್ವಿಗೆ, ಆ ಗರತಿಗೆ ಸಂಸಾರ ಅಸಹ್ಯವಾಗಿದೆ.

ಮಣ್ಣನ್ನು ತಿಂದರೂ ಅತ್ತೆಯ ಮನೆಬ್ಯಾಡ ।
ಅಂದಣದ ಮ್ಯಾಲ ಚವುರವ । ಸೋದರ । ಹಂಗೀನ ಅತ್ತೆಮನಿಸಾಕ ।

ಸೇವೆಮಾಡುತ್ತೇನೆಂದರೂ ಮನೆಗೆ ಬರುವುದಿಲ್ಲವೆನ್ನುವ ಪತಿರಾಯ ಎಂಥವ ? ಈರೀತಿ ಸೇವೆಮಾಡುವ ಭಾರ್ಯೆಯು ಅವನು ತಪಸ್ಸು ಮಾಡಿದರೂ ಸಿಗುವಳೇ? ಇತ್ಯಾದಿಯಾಗಿ ಯೋಚನೆಮಾಡುತ್ತಲಿರುವಾಗ ದಣಿದ ಪತಿರಾಯರ ಶರೀರವು ಒಳಗೆ ಪ್ರವೇಶಿಸುವುದು. ಸಾಧ್ವಿ ಗರತಿಗೆ ಬಹಳ ಕೋಪ ಬಂದಿದೆ. ಈ ಸೇವೆಯಾದರೂ ಮಾಡೇಬಿಡಬೇಕೆಂದು ನಿರ್ಧರಿಸಿದ್ದಾಳೆ.

ರಾಗಿ ಬೀಸುವಕಲ್ಲೇ ರಾಯರ ತಲೆಕಲ್ಲೇ,
ಬಿತ್ತರದಕಲ್ಲೇ ಬೀಳು ಬೇಗ ।
ಬಿತ್ತರದಕಲ್ಲೇ ಬೀಳು ಬೇಗ । ಎಂದರೆ ।
ಕತ್ತಿನವಲ್ಲೀ ಬಿಗಿದಾರು ।

ರಾಗಿ ಬೀಸುವ ಕಲ್ಲು ಎತ್ತಿ ರಾಯರ ತಲೆ ಒಡೆದು ಹಾಕಿಬಿಡಬೇಕೆಂದು ಕಲ್ಲನ್ನು ಎತ್ತಿ ಸೇವೆಮಾಡಲು ಪ್ರಯತ್ನಿಸುತ್ತಾಳೆ. ರಾಯರು ತಿಳುವಳಿಕಸ್ಥರು. 'ಹಲಸಿನಹಣ್ಣು ಕೊತ್ತಿದಂಗ' ಇರುವವಳನ್ನು ಮದುವೆಯಾದರೂ ಅವರ ಮೆದುಳಿನಲ್ಲಿ ಹಲಸಿನ ಹಣ್ಣನ್ನು ಕೊತ್ತಿರಲಿಲ್ಲ. ಅದು ಶುದ್ಧವಾಗಿತ್ತು. ಅವಳಿಂದ ಸೇವೆ ಕೈಕೊಳ್ಳಕೂಡದಾಗಿ ನಿಶ್ಚಯಿಸಿ ಕತ್ತಿಗೆ ವಲ್ಲಿಯನ್ನು ಬಿಗಿದು ಯಾತ್ರೆಗೆ ಸಿದ್ಧರಾಗುತ್ತಾರೆ. ಮುಂದೆಲ್ಲವೂ ಭಯಾನಕ ಕಥೆ. ಪೋಲೀಸು ಖೂನಿ, ಪತ್ತೇದಾರೀ ಇತ್ಯಾದಿ. ಅದು ನಮಗೆ ಬೇಡ. ಅದಕ್ಕೆ ಜನಪಾದ ಸಾಹಿತ್ಯದ ಉತ್ತರಕಾಂಡವೆನ್ನುತ್ತಾರೆ. ಅದನ್ನ ಬೇರೊಂದು ಸಲ ತಿಳಿಸೋಣ.

—ಸೂಲಿಬೆಲೆ.

———o———

ಹರಾಜು ಯುದ್ಧ

—o—

ಒಂದು ಸಾರಿ, ಹತ್ತು ರೂಪಾಯಿ,

ಎರಡು ಸಾರಿ ಹತ್ತು ರೂಪಾಯಿ.

ಎರಡು ಸಾರಿ ಹತ್ತು ರೂಪಾಯಿ,

ಹನ್ನೊಂದು !

ಹನ್ನೊಂದು ರೂಪಾಯಿ, ಹನ್ನೊಂದು ರೂಪಾಯಿ

ಒಂದು ಸಾರಿ ಹನ್ನೊಂದು ರೂಪಾಯಿ....

ಎರಡು ಸಾರಿ ಹನ್ನೊಂದು ರೂಪಾಯಿ.

ಹದಿನೈದು !

ಹದಿನೈದು ರೂಪಾಯಿ,

ಒಂದು ಸಾರಿ ಹದಿನೈದು ರೂಪಾಯಿ.

ಎರಡು ಸಾರಿ ಹದಿನೈದು ರೂಪಾಯಿ.

ಎರಡು ಸಾರಿ ಹದಿನೈದು ರೂಪಾಯಿ

ಮೂರು ಸಾರಿ ! ಹದಿನೈದು.

ಮೇಜನ್ನು ಕುಟ್ಟಿ ಹರಾಜುದಾರನು, ಹಿತ್ತಾಳೆಯ ನರ್ತಕಿಯ ಗೊಂಬೆಯೊಂದನ್ನು ಸವಾಲುಮಾಡಿದವನಿಗೆ ಕೊಡುವನು. ಇದ್ದವರಿಗೆಲ್ಲಾ ಆಶ್ಚರ್ಯ. ಈ ಯುದ್ಧ ಕಾಲದಲ್ಲಿ ಸಕಲವೂ ಪ್ರಿಯವಾದ ಸಮರಕಾಲದಲ್ಲಿ, ಕೈಮುರಿದ ಹಿತ್ತಾಳೆ ನರ್ತಕಿಯ ಬೊಂಬೆಗೆ ಹದಿನೈದು ರೂಪಾಯಿ ಕೊಡುವ ಹುಚ್ಚನೂ ಇದ್ದಾನಲ್ಲ ಎಂದು. ಕವಿಯು ಹಾಡಲಿಲ್ಲವೇ

> ಸಮರಕಾಲದಲಿ ಸಕಲವೂ ತಗ್ಗು
>
> ಅಗ್ಗವಾದುದು ಮನುಜ ದೇಹವೊಂದೇ !

ಹತ್ತು ರೂಪಾಯಿಗೆ ಕೈಕಾಲು ತುಂಬಿಕೊಂಡಿರುವ ಕಣ್ಣು ಮಿಟಕಿಸುವ ನರ್ತಕಿಯೇ ಸಿಗುವ ಸಮರಕಾಲದಲ್ಲಿ, ಕೈಮುರಿದ ಗೊಂಬೆಗೆ ಹದಿನೈದು ಕೊಡುವವನು ಮೂರ್ಖನೇ ಅಲ್ಲವೇ !

ಆ ಹರಾಜಾದಾಗ ನೋಡಿ, ಥಾನುವಾರ ಕೆಲಸವಿಲ್ಲದೆ, ಜನ ಸಂದಣಿ ನೋಡಿ ನಾನೂ ಹೋದೆ. ಮುರುಕು ಕೈಯಿನ ಗೊಂಬೆಗೆ ಹದಿನೈದು, ಮೂರು ಕಾಲಿನ ಮಂಚಕ್ಕೆ ಮೂವತ್ತು, ಒಂದು ಪ್ರೊಟ್ಟಣ ಪೊಳೆಗೆ ಮೂವತ್ತೈದು, ಹಳೆಯ ಹಾರ್ಲಿಕ್ಸಿನ ಡಬ್ಬಕ್ಕೆ ಎರಡು, ಈರೀತಿ ಬೆಲೆಗಳು ದೊರಕಿದುವು. ಸಾಮಾನು ಹೊಸದಾಗಿ ಕೊಂಡಿದ್ದರೆ, ಮೂರರಲ್ಲೊಂದೋ, ನಾಲ್ಕರಲ್ಲೊಂದೋ ಬೆಲೆಗೆ ಸಿಗುತ್ತಿತ್ತು. ಆದರೆ, ಹರಾಜುದಾರನು ಕೂಗಲಾರಂಭಿಸಿದರೆ, ಒಂದಕ್ಕೆ ಹತ್ತು, ಒಂದಕ್ಕೆ ಹದಿನೈದು ಇದರ ಮರ್ಮ ನನಗೆ ತಿಳಿಯಲೇ ಇಲ್ಲ. ಹಿಂದಿರುಗಿ ಬರುತ್ತಾ ನಮ್ಮ ಶಿವಣ್ಣ ಸಿಕ್ಕಿದ. ಅವನಿಗೆ ಈ ಸುದ್ದಿಯೆಲ್ಲಾ ಹೇಳಿದೆ. ಅವನು ಹೇಳಿದ.

ನೋಡು, ಮಗು. ಹರಾಜಿನಲ್ಲಿ ಸಾಮಾನಿನ ಬೆಲೆ, ಅಷ್ಟು ಮುಖ್ಯವಲ್ಲ. ಪೈಪೋಟಿ ಮುಖ್ಯ. ಕುಂಬಳಕಾಯಿ ಕಂಟ್ರಾಕ್ಟರು ಹತ್ತುರೂಪಾಯಿ ಸವಾಲು ಕೂಗಿದರೆ, ಹಲಸಿನ ಕಾಯಿ ಕಂಟ್ರಾಕ್ಟರು ಹನ್ನೆರಡು ಎಂದು ಕೂಗಲೇಬೇಕು. ಇಲ್ಲದಿದ್ದರೆ ಅವನವಮಾನಕ್ಕೆ ಕಡಿಮೆ. ಈ ಪೈಪೋಟಿಯು ಸವಾಲುದಾರನ ಆತ್ಮ ಗೌರವವನ್ನು ಅವಲಂಬಿಸಿದ್ದು. ಆದಕ್ಕಾಗಿಯೇ ಹಾಗೇ ಸವಾಲು ಹಾಕುತ್ತಾನೆ. ಹೀಗಾಗಿ ಸಾಮಾನು ಏನಾದರೇನು ಆದರ ಬೆಲೆ ಯೋಗ್ಯತೆ ಯಾರಿಗೆಬೇಕು. ಸವಾಲುದಾರನ ಯೋಗ್ಯತೆ ಬೆಲೆ ಮುಖ್ಯ, ಅದರಿಂದ ಹೀಗೆ ಬೆಲೆ ಏರುವುದು.

ಈಗ ನೋಡು, ಹಿಂದೂಸ್ಥಾನ, ಚೈನಾ ಇವೆಲ್ಲಾ, ವ್ಯಾಪಾರಸ್ಥರ ಹರಾಜಿನಲ್ಲಿ ನಿಂತಿವೆ ಎಂದುಕೊ, ಸವಾಲುದಾರರು ಯಾರು ಯೋಚಿಸು. ಅವರವರ ಯೋಗ್ಯತೆಗೆ ತಕ್ಕಹಾಗೆ, ಪೈಪೋಟಿ ನಡೆಸುತ್ತಾರೆ. ಈ ದೇಶಗಳ ಯೋಗ್ಯತೆ ಬೆಲೆ ಯಾರಿಗೆಬೇಕು ? ಇದನ್ನು ಗೆಲ್ಲಬಹುದಾದವರು ಸವಾಲುಮಾಡಬೇಕು, ಅದು ಏರಬೇಕು, ಇಷ್ಟೇ ನೋಡು ಇದರ ಮರ್ಮ.

ರಾಜಕೀಯಕ್ಕೆ ಮಾತ್ರವೇ ಅಲ್ಲ, ಮನೆಮುಂದಿಗೆಲ್ಲಾ ಇದೇ ನೀತಿ, ಇದೇರೀತಿ

ಎಂದು ಹೇಳಿದ.

ನನಗೇನೋ ಸಮಸ್ಯೆ ಪರಿಹಾರವಾಗಲಿಲ್ಲ. ನನ್ನ ಬುದ್ಧಿ ಮಂದವೋ, ಅಥವಾ ಶಿವಣ್ಣನು ಹುಚ್ಚನೋ ಹೇಳಲಾರೆ.

ನೀವೇ ಹೇಳಬೇಕು.

---o---

ನಿಮ್ಮನ್ನು ಆಶ್ಚರ್ಯಗೊಳಿಸುವ ಮಹತ್ತರ ದೃಶ್ಯಪ್ರದರ್ಶನ

ಸಾರಥಿಯವರ ದೃಶ್ಯವೆಂದರೆ

ಉತ್ತಮ ದರ್ಜೆಯ ದೃಶ್ಯವೆಂದೆ

"ಮಾಯಾ ಲೋಕಂ"



ಭೂಮಿಕೆ

ಆಂಧ್ರದೇಶದ ಸುಪ್ರಸಿದ್ಧ
ನಟೀನಟರ ಸಮೂಹ

ಕನ್ನಾಂಬ,
ಸಿ. ಎಸ್. ಆರ್.
ಆಂಜನೇಯಲು,
ಕಮಲಾ ಕೋಟ್ನಿಸ್,
ಜಿ. ವಿ. ಸುಬ್ಬರಾವ್,
ಬೆಜವಾಡ ರಾಜರತ್ನಂ,
ಲಂಕಾ ಸತ್ಯಂ, ಸುಪ್ರಸಿದ್ಧ ಕನ್ನಡ ತಾರೆ ಎಂ. ವಿ. ರಾಜಮ್ಮ

ಇವರೇ ಮೊದಲಾದವರು ನಟಿಸಿರುವರು

—o—

ಪ್ರೊಡ್ಯೂಸರ್ ಮತ್ತು ಚಿತ್ರ ನಿರ್ದೇಶಕರು :

ಜಿ. ರಾಮಬ್ರಂಹಂ

FOR MYSORE STATE, SOUTH CANARA & COORG:

Vijayalakshmi & Co.

BOOKING THROUGH :

A. V. RAMANAMURTY

247, Gandhi Nagar :: Bangalore City

ಭಾರತೀಯ ಕಾರ್ಮಿಕರಿಂದ

ಭಾರತೀಯ ಬಂಡವಾಳಗಾರರಿಂದ

ಭಾರತೀಯ ಕಲಾಕೌಶಲ್ಯದಿಂದ

ಕೂಡಿರುವುದೇ


ಬೆಂಗಾಲ್ ಲ್ಯಾಂಪ್ಸ್

ತಯಾರಿಕೆಯ ವೈಶಿಷ್ಟ್ಯ

ಭಾರತದಲ್ಲೆಲ್ಲಾ ಉತ್ತಮವಾದುದೆಂದು

ಖ್ಯಾತಿಪಡೆದಿದೆ




Toilet Soap

THE MYSORE SPUN SILK MILLS. LTD

CHANNAPATNA

(Mysore State)

(ESTABLISHED 1936)

—o—

Authorised and Issued Share Capital	**Rs. 10,00,000**
Paid up Share Capital	**Rs. 10,00,000**

SPUN SILK YARNS & NOIL YARNS OF VARIOUS COUNTS ARE MANUFACTURED

—o—

RAW SILKS OF ALL DENIERS ARE ALSO MANUFACTURED IN THE SILK FILATURE —ATTACHED TO THE MILLS—

K. SHAMSUDDIN KHAN
Manager.

Printed by B. S. Iyengar, Bangalore City.
Publisher—S. N. Gupta. Editor—M. SHIVARAM.